271

ಪತಿವ್ರತಾಪ್ರಭಾವ

ಅಥವಾ

ಅನಸೂಯಾದೇವಿಯ ಚರಿತ್ರೆ



ಗ್ರಂಥಕರ್ತರು

ಉಮಾಬಾಯಿ ಲಿಂಗೋ ಕುಲಕರ್ಣಿ (ಖನ್ನೂರ)

ಧಾರವಾಡ

ಪ್ರತಿಗಳು

ಮೊದಲನೆಯ ಆವೃತ್ತಿಯು

ಬೆಲೆ ಒಂದು ಆಣೆ

ಮೊದಲ್ಮಾತು

ಪತಿವ್ರತಾಪ್ರಭಾವ ಎಂಬ ಅನಸೂಯಾಮಾತೆಯ ಚರಿತ್ರೆಗೆ ಮುನ್ನುಡಿ ಬರೆಯಲು, ಗ್ರಂಥಕರ್ತರಾದ ಶ್ರೀಮತಿ ಸೌ. ಕುಲಕರ್ಣಿ ಉಮಾದೇವಿಯವರು ಅದಾವ ವಿಶ್ವಾಸದಿಂದಲೋ ನನ್ನನ್ನು ಕೇಳಿಕೊಂಡಿದ್ದಾರೆ. ಯಾರ ಮುನ್ನುಡಿಯೂ ಬೇಕಿಲ್ಲದೆ ಸ್ವ-ಪ್ರಕಾಶದಿಂದ ಬೆಳಗುವ ಈ ಗ್ರಂಥಕ್ಕೆ ನನ್ನಂತಹನ ಮುನ್ನುಡಿಯೇಕೆ ಎಂಬ ಶಂಕೆ ನನ್ನನ್ನಾವರಿಸಿತು! 'ಮಾತಿಗೆ ಮೊದಲು ಗಾದೆ' ಎನ್ನುವಂತೆ, ಇದೀಗ 'ಗ್ರಂಥಕ್ಕೆ ಮೊದಲು ಮುನ್ನುಡಿ' ಎಂಬ ಪ್ರಘಾತವಾಗಿ ಬಿಟ್ಟಿದೆ. ಆ ಸಂಪ್ರದಾಯದ ಕಟ್ಟಿಗೇ ಈ ಗ್ರಂಥಕರ್ತರೂ ಶರಣು ಹೋಗಿರಬಹುದೇ ಎಂಬ ಶಂಕೆ ನನಗೆ. ಇರಲಿ.

ಶ್ರೀ. ಸೌ. ಉಮಾದೇವಿಯವರಿಗೆ ಭಾರತದ ಪ್ರಾಚೀನ ಸಂಸ್ಕೃತಿಯಲ್ಲಿಯೂ, ಧಾರ್ಮಿಕ ತತ್ತ್ವಬೋಧೆಯಲ್ಲಿಯೂ, ಆಧ್ಯಾತ್ಮಿಕ ವಿಚಾರದಲ್ಲಿಯೂ ತುಂಬಾ ಆಸ್ಥೆ. ಅತ್ಯುಚ್ಚವಾದ ನೈತಿಕ ನೆಲೆಯ ಹುಚ್ಚು ಅವರಿಗೆ ಬಹಳ. ಪವಿತ್ರಾಚರಣೆಯೇ ರೂಹುಗೊಂಡಂತಿದೆ ಅವರ ಜೀವನ. ಹೆಚ್ಚಿನ ಶಾಲೇಯ ಶಿಕ್ಷಣದ ಲಾಭ ಅವರಿಗಿಲ್ಲವಾದರೂ, ಮನೆಪ್ರಪಂಚವನ್ನು ನಿರ್ವಹಿಸಿಕೊಂಡುಳಿದ ಕೊಂಚ ಕಾಲವನ್ನು ಸಹ ವ್ಯರ್ಥ ಕಳೆಯದೆ, ಸ್ವಂತ ಪರಿಶ್ರಮದಿಂದ ಜ್ಞಾನಾರ್ಜನೆ ಮಾಡಿಕೊಂಡು, ಈ ಗ್ರಂಥವನ್ನು ಬರೆದಿರುವುದು ತುಂಬಾ ಅಭಿನಂದನೀಯವಾಗಿದೆ. ಈ ಗ್ರಂಥವು ಅವರ ಪ್ರಥಮ ಪ್ರಯತ್ನವು.

ಶ್ರೀ. ಸೌ. ಉಮಾದೇವಿಯವರೊಳ್ಳೇ ಉತ್ತಮ ಕಲೆಗಾರ
ಕತೆಗಾರರು. ಸಾಂಪ್ರದಾಯಕವಾದ ಕಾದಂಬರಿ ಪದ್ಧತಿಯಿಂದ ಹೊ
ಟಿದ್ದರೂ, ಅವರ ಕಥಾನಿರೂಪಣೆಯಲ್ಲಿ ನಾವೀನ್ಯತೆಯಿದೆ. ಅವ
ಮಾತುಗಳು ತುಂಬಾ ಅರ್ಥಗರ್ಭಿತವಾಗಿವೆ. ಸರಳವಾದ, ಲಲಿತವಾ
ನಿರರ್ಗಳವಾದ ಶೈಲಿಯಲ್ಲಿ ರಸವತ್ತಾಗಿ ಕತೆಹೇಳುವ ಅನುಕ
ಚಾತುರ್ಯ ಅವರಿಗೆ ಚನ್ನಾಗಿ ಸಾಧಿಸಿದೆ. ದಾಸರ ಪಾರಮಾರ್ಥಿ
ತತ್ತ್ವಪದಗಳನ್ನು ಯುಕ್ತಿಯಿಂದ ಸನ್ನಿವೇಶಕ್ಕನುಗುಣವಾಗಿ ಅಲ್ಲ
ನಡುನಡುವೆ ಪವಣಿಸಿದ್ದಾರೆ.

ಏಕೆ, ಏನು, ಎಂತು ಎಂಬಿವೇ ಮೊದಲಾದ ಪ್ರಶ್ನೆಗಳ ಕೂಗ
ಎಲ್ಲೆಲ್ಲಿಯೂ ಕೇಳಬರುತ್ತಿರುವ ಈ ಪ್ರಶ್ನೆಯುಗ (age of inter
rogation)ದಲ್ಲಿ ಸ್ವಾತಂತ್ರ್ಯದ ಅತಿರೇಕಕ್ಕೆ ಮೋಹಗೊಂಡಾಗ ಅದ
ಹೆಸರಿನಿಂದ ಹಲಕೆಲವು ಸಾರೆ ಸ್ವೇಚ್ಛೆ-ಉಚ್ಛೃಂಖಲವೃತ್ತಿಗಳ ಪ
ಣಾಮವಾಗಿ ಆಗುತ್ತಲಿರುವ ಅನರ್ಥೋತ್ಪಾತಗಳಿಗೆ ತಡೆಯುಂಟಾಗಿ
ಐಕ್ಯತೆ-ಸುಖ-ಶಾಂತಿ-ಸಮಾಧಾನಗಳು ಸಮಾಜದಲ್ಲಿ—ಮೊದಲು ಪ್ರ
ಯೊಂದು ಕುಟುಂಬದಲ್ಲಿ—ನೆಲಿಸುವಂತಾದರೆ, ಸಮಾಜ ಪೋಷಣ
ಪ್ರೇರಿತರಾದ ಈ ಗ್ರಂಥಕರ್ತರ ಶ್ರಮಸಾಫಲ್ಯವಾದಂತಾಗುವದು.

ಧಾರವಾಡ
೧೫--೪--೧೯೪೧

ಕನ್ನಡಿಗರಡಿಯಾಳು,
ಚಂದ್ರಶೇಖರಸ್ವಾಮಿ ಗ. ಹೊನ್ನಾಪುರಮ
ಬಿ. ಎ., ಎಲ್ಎಲ್. ಬಿ., ವಕೀಲ

ಮುನ್ನುಡಿ

ನನ್ನ ಮಿತ್ರರಾದ ಶ್ರೀಯುತ ಲಿಂಗೋ ಶಂಕರ ಕುಲಕರ್ಣಿ ಬಿ. ಎ., ಎಲ್‌ಎಲ್. ಬಿ ವಕೀಲ ಧಾರವಾಡ ಇವರ ಧರ್ಮಪತ್ನಿಯವರಾದ ಶ್ರೀಮತಿ ಸೌಭಾಗ್ಯವತಿ ಉಮಾಬಾಯಿಯವರು ಬರೆದಿರುವ ಈ 'ಪತಿವ್ರತಾ ಪ್ರಭಾವ' ಅಥವಾ 'ಅನಸೂಯಾದೇವಿ'ಯ ಚರಿತ್ರೆಯನ್ನು ಸಂಪೂರ್ಣವಾಗಿ ಓದಿ ನೋಡಿರುವೆನು. ಈ ಚರಿತ್ರೆಯು ಸುಲಭ, ಸರಳ ಭಾಷೆಯಲ್ಲಿ ಬರೆಯಲ್ಪಟ್ಟಿರುತ್ತಿದ್ದು, ಅಲ್ಪಸ್ವಲ್ಪ ಶಿಕ್ಷಣ ಪಡೆದ ಹೆಂಣು ಮಕ್ಕಳಿಗೂ ಓದಿ ತಿಳಿದುಕೊಳ್ಳಲನುಕೂಲವಾಗಿದೆ. ಪಾತಿವ್ರತ್ಯದ ಪ್ರಭಾವವನ್ನು ಕತೆಯರೂಪದಿಂದ ಹೇಳುವ ಗುರಿಯನ್ನೆ ಮುಂದಿಟ್ಟುಕೊಂಡು ಈ ಚಿಕ್ಕ ಪುಸ್ತಕವನ್ನು ಬರೆದದ್ದಾಗಿದೆ. ಈ ಚರಿತ್ರೆಯಲ್ಲಿ ವಿವರಿಸಿದ ಅನೇಕ ಸಂಗತಿಗಳು ಆಧುನಿಕ ಚಿಕಿತ್ಸೆಯ ಕಾಲದಲ್ಲಿ ಅತಿಶಯೋಕ್ತಿಗಳಾಗಿ ಅದೇಕೆ! ಕೆಲವಂಶದಿಂದ ಅಸಂಭವನೀಯವಾಗಿ ಕಂಡರೂ, ಚರಿತ್ರೆಯಲ್ಲಿ ಅಂತರ್ಭೂತವಾಗಿರುವ ಭಾವನೆಯ ಕಡೆಗೆ ವಾಚಕರು ಗಮನಿಸಬೇಕು. ಏನೇ ಆಗಲಿ! ಶ್ರೀಮತಿ ಉಮಾಬಾಯಿಯವರ ಪ್ರಯತ್ನವು ಸ್ತುತ್ಯವಾದದ್ದು ಹಾಗು ಉತ್ತೇಜನಾರ್ಹವಾದುದು ಇದೆ. ಕರ್ನಾಟಕದ ನನ್ನ ಅಕ್ಕ-ತಂಗಿಯರು ಈ ಚರಿತ್ರೆಯನ್ನು ಓದಿ ಅದರಲ್ಲಿ ವ್ಯಕ್ತವಾಗಿರುವ ಸದ್ಭಾವನೆಗಳನ್ನು ಮನನಮಾಡುವರೆಂದು ನಾನು ಆಶಿಸುತ್ತೇನೆ ಹೀಗಾದಲ್ಲಿ ಗ್ರಂಥಕರ್ತರ ಶ್ರಮಕ್ಕೆ ತಕ್ಕ ಪ್ರತಿಫಲವು ದೊರೆತಂತಾಗುವದು. ಶ್ರೀಮತಿ ಉಮಾಬಾಯಿಯವರು ಇದರಂತೆಯೇ ಗ್ರಂಥಲೇಖನದ ಹೆಚ್ಚಿನ ಪ್ರಯತ್ನವನ್ನು ಮಾಡುವರೆಂಬಾಶೆ !!

Dharwar
12—4-41

D. L. Patil
B. A., LL. B. Advocate &
Editor 'Lokamitra' Dharwar

ಶ್ರೀ. ಹೊನ್ನಾಪುರಮಠ ಇವರು ರಚಿಸಿ ಪ್ರಕಟಿಸಿದ ಗ್ರಂಥಗಳು

೧.	ಶ್ರೀ ಸಮರ್ಥ ರಾಮದಾಸಸ್ವಾಮಿಗಳ ಚರಿತ್ರ.	ಬೆಲೆ	೧ ರೂಪಾಯಿ.
೨.	ಶ್ರೀಕೃಷ್ಣ ಚರಿತ್ರ. (ಸಚಿತ್ರ)	,,	೧ ರೂಪಾಯಿ.
೩.	ತ್ರಾಟಿಕಾ ನಾಟಕ. (ಗದ್ಯ)	,,	೧ ರೂಪಾಯಿ.
೪.	ನೀತಿಮಂಜರಿ.	,,	೧೨ ಆಣೆ.
೫.	ಬಾಲಭಾರತ (ಸಚಿತ್ರ)	,,	೧೦ ಆಣೆ.
೬	ಬಾಲರಾಮಾಯಣ (ಸಚಿತ್ರ)	,,	೮ ಆಣೆ.
೭.	ಬಾಲಭಾಗವತ. (ಸಚಿತ್ರ)	,,	೮ ಆಣೆ.
೮.	ಶ್ರೀ ರಾಮಕೃಷ್ಣ ಪರಮಹಂಸರ ಸತ್ಕಥೆಗಳು	,,	೧೦ ಆಣೆ.
೯.	ಶ್ರೀ ಶಿವಲೀಲಾಮೃತ ಕಥೆಗಳು. (ಸಚಿತ್ರ)	,,	೧೦ ಆಣೆ.
೧೦.	ಅದ್ಭುತಪ್ರೇಮ ಕಾದಂಬರಿ (ಐತಿಹಾಸಿಕ)	,,	೧೨ ಆಣೆ.
೧೧.	ನಿಂದಾಪ್ರಭಾವ ನಾಟಕ. (ಗದ್ಯ)	,,	೧೨ ಆಣೆ.
೧೨.	ಪ್ರಹ್ಲಾದ ಚರಿತ್ರ. (ಸಚಿತ್ರ)	,,	೬ ಆಣೆ.
೧೩.	ಸಾವಿತ್ರೀ ಚರಿತ್ರ. (ಸಚಿತ್ರ)	,,	೫ ಆಣೆ.
೧೪.	ಸುದಾಮ ಚರಿತ್ರ. (ಸಚಿತ್ರ) ...	,,	೪ ಆಣೆ.
೧೫.	ಧ್ರುವ ಚರಿತ್ರ. (ಸಚಿತ್ರ)	,,	೨½ ಆಣೆ.
೧೬.	ಚಿಲ್ಲಾಳ ಚರಿತ್ರ.	,,	೨ ಆಣೆ.
೧೭.	ಶ್ರೀ ಬಸವೇಶ್ವರ ಚರಿತ್ರ. (ಸಚಿತ್ರ)	,,	೬ ಆಣೆ.
೧೮.	ಶ್ರೀ ಸ್ವಾಮಿ ರಾಮತೀರ್ಥಚರಿತ್ರ (ಸಚಿತ್ರ)	,,	೧೦ ಆಣೆ.
೧೯.	ಅಬ್ರಹಾಮ ಲಿಂಕನ್ನ ಚರಿತ್ರ (ಸಚಿತ್ರ)	,,	೧೨ ಆಣೆ.
೨೦.	ಶ್ರೀ ಶನಿಮಾತ್ಮೆ. (ಸಚಿತ್ರ)	,,	೨ ಆಣೆ.
೨೧.	ವೀರ ವಿದುಲಾ.	,,	೨ ಆಣೆ.
೨೨.	ಅಲ್ಲಾವುದ್ದೀನ ಮತ್ತು ಒಂದು ಸೋಜಿಗವಾದ ದೀಪ.		೩. ಆಣೆ.

ಪ್ರಸ್ತಾವನೆ

ಮಹಿಳೆಯರೆ, ಹೆಣ್ಣುಮಕ್ಕಳಿಗೆ ಪಾತಿವ್ರತ್ಯವೇ ಮೇಲಾದದ್ದು. ನೋಡಿರಿ! ನಮ್ಮ ದೇಶದಲ್ಲಿ ಆಗಿಹೋದ ಎಷ್ಟೋ ಹೆಣ್ಣುಮಕ್ಕಳ ಚರಿತ್ರ ಗಳನ್ನು ನೀವು ಪುರಾಣೇತಿಹಾಸಗಳಲ್ಲಿ ಕೇಳಿರಬಹುದು. ಅಂಥ ಪತಿವ್ರತೆ ಯರ ನಾಮಸ್ಮರಣೆಯಿಂದ ಪಾಪಗಳು ಪರಿಹಾರವಾಗುವವು. ಅಹಲ್ಯಾ ದ್ರೌಪದಿ ಸೀತಾ। ತಾರಾ ಮಂಡೋದರಿ ತಥಾ। ಪಂಚಕನ್ಯಾಸ್ಮರೇನಿತ್ಯಂ। ಮಹಾಪಾತಕವಿನಾಶನಂ ॥ ಎಂಬ ಶ್ಲೋಕವೇ ಇದಕ್ಕೆ ಸಾಕ್ಷಿಯಾಗಿದೆ. ಅಹಲ್ಯಾದೇವಿಯು ಗೌತುಮಋಷಿ ಪತ್ನಿಯು. ಈಕೆಯ ಪಾತಿವ್ರತ್ಯವನ್ನು ಪ್ರಕಟಮಾಡಬೇಕೆಂದು ಶ್ರೀರಾಮನು ಈಕೆಯನ್ನು ಉಂಗುಷ್ಟದಿಂದ ಉ ದ್ಧಾರಮಾಡಿದನು. ದ್ರೌಪದಿಯು ಭಾರತದಲ್ಲಿ ಶ್ರೇಷ್ಠಳೆನಿಸಿಕೊಂಡವಳು. ಇವಳು ತನ್ನ ಪತಿಗಳ ಸುಖದುಃಖಗಳಲ್ಲಿ ಸಹ ನೆರಳಿನಂತೆ ಸಂಗಡ ಇದ್ದು ಎಷ್ಟು ಕಷ್ಟಗಳು ಬಂದರೂ ಸಹಿಸಿಕೊಂಡು, ತನ್ನ ಪಾತಿವ್ರತ್ಯವನ್ನು ಕಾಪಾಡಿಕೊಂಡು ಶ್ರೀಕೃಷ್ಣಪರಮಾತ್ಮನ ತಂಗಿಯೆಂದೆನಿಸಿಕೊಂಡಳು. ಸೀತೆಯು ಶ್ರೀರಾಮ ಪತ್ನಿಯು. ತನ್ನ ಪಾತಿವ್ರತ್ಯ ಪ್ರಭಾವದಿಂದಲೇ ಇಷ್ಟು ಪ್ರಖ್ಯಾತಿಗೆಬಂದಳು. ತಾರಾದೇವಿಯು ಶ್ರೀರಾಮನ ಪರಮಭಕ್ತನಾದ ಸುಗ್ರೀವನ ಹೆಂಡತಿಯು. ಇವಳನ್ನು ಸುಗ್ರೀವನ ಅಣ್ಣನಾದ ವಾಲಿಯು ತನ್ನ ಮನೆಯಲ್ಲಿ ಕದ್ದೊಯ್ದಿಟ್ಟಿದ್ದನು. ಇಂಥ ಸಂಕಟ ಸಮಯದಲ್ಲಿ ಸಹ ಯಾವಾಗಲೂ ಪತಿಸ್ಮರಣೆಯಲ್ಲಿ ಕಾಲಕಳೆದು ಪತಿವ್ರತಾಧರ್ಮವನ್ನು ಕಾಪಾಡಿಕೊಂಡದ್ದರಿಂದ ಪತಿಯನ್ನು ಪುನಃ ಹೊಂದಿದಳು. ಮಂಡೋದ ರಿಯು ರಾವಣನ ಹೆಂಡತಿಯು. ಈಕೆಯ ಪತಿವ್ರತಾಧರ್ಮದ ಪ್ರಭಾವದಿಂ ದಲೇ ರಾವಣನು ತ್ರಿಲೋಕಾಧಿಪತಿಯೆನಿಸಿಕೊಂಡನು. ಈ ಪಂಚರತ್ನಗ ಳಿಗೆ ಮಿಗಿಲಾದ ಆರನೇ ರತ್ನವೇ ನಮ್ಮ ಕಥಾನಾಯಿಕೆಯಾದ ಅನಸೂ ಯಾ ಮಾತೆಯು. ಈರತ್ನದ ಚರಿತ್ರವನ್ನು ಸ್ವಲ್ಪದರಲ್ಲಿಯೇ ಹೇಳಲಾಗಿದೆ.

ಸಜ್ಜನ ವಿಧೇಯ,

ಉಮಾಬಾಯಿ ಲಿಂಗೋ ಕುಲಕರ್ಣಿ

ಗ್ರಂಥಕರ್ತರು

ಅರ್ಪಣ ಪತ್ರಿಕಾ

ನನ್ನ ಪರಮ ಪೂಜ್ಯ ಮಾತಾಮಹಿಯರಾದ ವೈ। ವಾ
ರಂಗೂಬಾಯಿ ಉರ್ಫ ಕೃಷ್ಣಾಬಾಯಿ ಕುಲಕರ್ಣಿ ಖನ್ನೂರ ಇವ
ಸ್ವರ್ಗಸ್ಥರಾದ ಆತ್ಮಕ್ಕೆ ಚಿರಶಾಂತಿಯುಂಟಾಗಲೆಂದು ಅತ್ಯಂತ ಕೃ
ಜ್ಞತೆಯಿಂದಲೂ ಮಾತೃಭಕ್ತಿಯಿಂದಲೂ ಪತಿವ್ರತಾ ಪ್ರಭಾವ ಎಂ
ಈ ಚಿಕ್ಕ ಪುಸ್ತಕವನ್ನು ಸಮರ್ಪಿಸಿದ್ದೇನೆ.

ಲೇಖಕ:- ಉಮಾಬಾಯಿ ಕುಲಕರ್ಣಿ

ಮೊದಲನೆಯ ಭಾಗ

ಇಂದ್ರನ ಸಭೆ

ಅಮರಾವತಿ ಪಟ್ಟಣದಲ್ಲಿ ಆ ದಿವಸ ಒಳ್ಳೇ ವೈಭವ; ಎಲ್ಲ ಬೀದಿಗಳಲ್ಲಿ ತೋರಣಗಳನ್ನು ಕಟ್ಟಿದ್ದರು. ರಾಜವಾಡೆಯಂತೂ ಅತಿರಮಣೀಯವಾಗಿ ಒಪ್ಪುತ್ತಿತ್ತು. ಎಲ್ಲ ಕಡೆಯಿಂದಲೂ ಗುಂಪುಗುಂಪಾಗಿ ಬರುವ ಜನರ ಸಂದಟ್ಟಣೆಯಿಂದ ಒಬ್ಬರ ಮಾತು ಮತ್ತೊಬ್ಬರಿಗೆ ಕೇಳಿಸದಂತೆ ಆಗಿತ್ತು. ಎಲ್ಲರೂ ತಮ್ಮ ಬಂಧು-ಬಳಗದವರನ್ನು ಕರೆಯಿಸಿದ್ದರು. ಅಲ್ಲಲ್ಲಿ ಜನರೊಳಗೆ ಪತಿವ್ರತಾ ಧರ್ಮದ ಬಗ್ಗೆ ಚರ್ಚೆಯು ನಡೆದಿತ್ತು. ದೇವೇಂದ್ರನ ಸಭೆಗೆ ಕೈಲಾಸದಿಂದ ಶಂಕರನು ಪಾರ್ವತಿ ಸಮೇತನಾಗಿ ಬಂದಿದ್ದನು. ಅವನೊಡನೆ ಎಲ್ಲ ಭೂತಗಣಗಳೂ ಬಂದಿದ್ದವು. ಬ್ರಹ್ಮನು ಸರಸ್ವತಿ, ಸುರಗಣಗಳೊಡನೆ ಬಂದಿದ್ದನು. ವೈಕುಂಠದಿಂದ ಶ್ರೀಮಹಾವಿಷ್ಣುವು ಶೇಷ-ಗರುಡ-ಲಕ್ಷ್ಮಿ ಸಮೇತ ಬಂದಿದ್ದನು. ಅಗಸ್ತ್ಯ, ಭಾರದ್ವಾಜ,ವಸಿಷ್ಠ, ವಿಶ್ವಾಮಿತ್ರಾದಿ ಮಹಾನ್ಮಹಾನ್ ಋಷಿಗಳು ಬಂದಿದ್ದರು. ಅಷ್ಟದಿಕ್ಪಾಲಕರಾದ ಇಂದ್ರ, ಅಗ್ನಿ, ಯಮ, ನೈರುತ್ಯ, ವರುಣ,ವಾಯು, ಕುಬೇರ, ಈಶಾನ್ಯ, ಇವರು ತಮ್ಮ ಸತಿಯರೊಡನೆ ಬಂದು ಎಲ್ಲರೂ ತಮ್ಮತಮ್ಮ ಉಚ್ಚಾಸನದ ಮೇಲೆ ಕುಳಿತರು. ರಂಭೆ, ಉರ್ವಸಿ, ಮೇನಕಾ ಮೊದಲಾದ ಅಪ್ಸರೆಯರು ನೃತ್ಯವಾಡಹತ್ತಿದ್ದರು. ಸಭೆಗೆ ಬಂದಿದ್ದ ಎಲ್ಲರೂ ತಮತಮಗೆ ತಿಳಿದಂತೆ ಪತಿವ್ರತಾ ಪ್ರಭಾವದ ಬಗ್ಗೆ ಮಾತಾಡಿದರು. ಅಷ್ಟರಲ್ಲಿ ರಾಮನಾಮೋಚ್ಚಾರ ಧ್ವನಿಯು ಕೇಳಹತ್ತಿತು. ಇದು

ಪೂರದಾಗಿರಬಹುದು? ಶಿವ! ರಾಮಾ! ಮನೋಹರನೆ ದೇವ! ಪತಿತಪಾವನಾ! ರಾಮಾ! ಎಂದು ವೀಣೆಯನ್ನು ನುಡಿಸುತ್ತ ನಾರದರು ತುಂಬುರರೊಡನೆ ಬಂದರು. ಅವರನ್ನು ಕಂಡು ಎಲ್ಲರೂ ಎದ್ದುನಿಂತು ನಮಸ್ಕಾರ ಮಾಡಿದರು. ಮತ್ತೆ ಮೊದಲಿನಂತೆ ಚರ್ಚೆಯು ಆರಂಭವಾಯಿತು. ಎಲ್ಲರ ಮಾತು ಮುಗಿಯುವದಕ್ಕಿಂತ ಮೊದಲೇ ನಾರದರು ಎದ್ದುನಿಂತು ದೇವತೆಗಳಲ್ಲಿ, ನಾಗರಲ್ಲಿ, ಯಕ್ಷರಲ್ಲಿ, ಕಿನ್ನರರಲ್ಲಿ ಋಷಿಗಳಲ್ಲಿ ಅತ್ರಿಋಷಿ ಪತ್ನಿಯಾದ **ಅನಸೂಯಾ** ದೇವಿಯೇ ಪತಿವ್ರತಾ ಧರ್ಮದಲ್ಲಿ ಶ್ರೇಷ್ಠಳೆಂದರು. ಅವರ ನುಡಿಗೆ ಎಲ್ಲರೂ ಜಯಜಯಕಾರ ಮಾಡಿದರು; ಎಲ್ಲರೂ ಒಪ್ಪಿಕೊಂಡರು. ಆದರೆ ಲಕ್ಷ್ಮಿ, ಸರಸ್ವತಿ, ಪಾರ್ವತಿಯರಿಗೆ ಮಾತ್ರ ಸಿಟ್ಟು ಬಂತು. ಇವರು ನಾರದರಿಗೆ ಆ ಮಾತು ಸತ್ಯಮಾಡಿ ತೋರಿಸಬೇಕೆಂದು ಹಟತೊಟ್ಟರು. ಸಭಾವಿಸರ್ಜನವಾಯಿತು. ಎಲ್ಲರೂ ಅನಸೂಯಾ ದೇವಿಯನ್ನು ಹೊಗಳುತ್ತ ತಮ್ಮತಮ್ಮ ಸ್ಥಾನಗಳಿಗೆ ತೆರಳಿದರು.

ಎರಡನೆಯ ಭಾಗ

ಪರ್ಣಕುಟಿರ

ವೈಶಾಖಮಾಸ; ಮಧ್ಯಾಹ್ನಕಾಲ; ಬಿಸಿಲು ಒಂದೇಸವನೆ ರಣಗುಟ್ಟಿ ಹತ್ತಿದೆ. ಹೊರಗೆ ಹೋಗಲು ಯಾರಿಗೂ ಮನಸ್ಸಿಲ್ಲ. ಮಾರ್ಗದಲ್ಲಿ ಪಶುಪಕ್ಷಿಗಳ ಸಂಚಾರವು ಸಹ ಇಲ್ಲ. ಅಡವಿಯಲ್ಲಿ ದನಕರುಗಳು ದೊಡ್ಡ ದೊಡ್ಡ ಮರಗಳ ನೆಳಲನ್ನು ಆಶ್ರಯಿಸಿವೆ. ನಸುಕುಹರಿಯುವದರೊಳಗಾಗಿ ಆಹಾರಶೋಧಕ್ಕೆ ಹೊರಟುಹೋದ ಪಕ್ಷಿಗಳು ತಿರುಗುವದನ್ನು

ಬಿಟ್ಟು, ವೃಕ್ಷಗಳ ಮೇಲೆ ಸುಶೀತಲವಾದ ಘನಪಲ್ಲವಗಳ ಮರೆಗೆ ಕುಳಿತಿವೆ. ಎಲ್ಲ ಕಡೆಯಲ್ಲಿ ಶಾಂತತಾದೇವಿಯ ಸಾಮ್ರಾಜ್ಯವೇ ನಡೆದದೆ. ಅಂಥ ಸಮಯದಲ್ಲಿ ಮೈಗೆ ಭಸ್ಮಲೇಪಿತನಾಗಿಯೂ, ಜಟಾಧಾರಿಯಾಗಿಯೂ, ಕೊರಳೊಳಗೆ ರುದ್ರಾಕ್ಷ ಮಾಲೆಗಳಿಂದ ಅಲಂಕೃತನಾಗಿಯೂ, ಹರಿನಾಮಸ್ಮರಣೆಯನ್ನು ಮಾಡುತ್ತ, ಕೈಯಲ್ಲಿ ತಂಬೂರಿಯನ್ನು ಹಿಡಿದು ಸುನಾದದಲ್ಲಿ

ಗೋವಿಂದಂ ಭಜಗೋವಿಂದಂಭಜ। ಗೋವಿಂದಾ ನಮ್ಮ ರಕ್ಷಿಸೊ। ಮಂಚಬಾರದು । ಮಡದಿ ಬಾರಳು । ಸಂಚಿತಾರ್ಥವು ಬಾರದು । ಕಂಚು ಕನ್ನಡಿ ಮೊದಲೆ ಬಾರವು। ಮುಂಚೆ ಮಾಡಿರಿ ಧರ್ಮವ ॥ ಎಂಬ ಪದವನ್ನು ಅನ್ನುತ್ತ ಅರಣ್ಯದ ಕಾಲುದಾರಿಯಿಂದ ನದೀ ತೀರದ ಕಡೆಗೆ ನಾರದರು ಸಾಗಿದ್ದರು.

ನದೀತೀರದ ಸಮೀಪದಲ್ಲಿರುವ ಪರ್ಣಕುಟಿರದ ಬಾಗಿಲಿಗೆ ಬಂದು ನೋಡುತ್ತಾರೆ. ಬಿಲ್ವ, ಅಶ್ವತ್ಥ, ಅತ್ತಿ, ಮಾವು, ತೆಂಗು ವೃಕ್ಷಗಳಿಂದಲೂ, ಮಲ್ಲಿಗೆ, ಶೇವಂತಿಕೆ, ಸಂಪಿಗೆ, ತುಳಸಿ ಮೊದಲಾದ ಉಪಯುಕ್ತ ಬನಗಳಿಂದಲೂ ಶೋಭಾಯಮಾನವಾಗಿರುವದನ್ನು ಕಂಡು ನಾರದರಿಗೆ ಅತ್ಯಾನಂದವಾಯಿತು. ಎಷ್ಟೇ ಬಿಸಿಲು ತಾಪವಾಗಿ ಬಂದರೂ ಗೋವನ್ನು ಕಂಡ ಕರುವಿನಂತೆ ಅವರ ಮನಸ್ಸಾಯಿತು. ವನದಲ್ಲಿ ಕಾಲಿಟ್ಟ ಕೂಡಲೇ ಇಷ್ಟು ಆನಂದವಾದ ಮೇಲೆ ಸಭೆಯಲ್ಲಿ ನುಡಿದ ತಮ್ಮ ಮಾತೇ ನಿಜವಾಗುವದೆಂದು ಸಂತೋಷದಿಂದ ಬಾಗಿಲ ಸಮೀಪಕ್ಕೆ ಹೋಗಿ "ಭವತಿ ಭಿಕ್ಷಾನ್ ದೇಹಿ" ಎಂದು ಕೂಗಿದರು. ಈ ಧ್ವನಿಯು ಕಿವಿಗೆ ಬಿದ್ದ ಕೂಡಲೆ ಅನಸೂಯಾ ಮಾತೆಯು ಯಾರಾದರೂ ಅತಿಥಿಗಳು ಬಂದಿರಬಹುದೆಂದು ತಿಳಿದು ಲಗುಬಗೆಯಿಂದ ಉಚ್ಚಾಸನವನ್ನು ಹಾಕಿ ಹೊರಗೆ ಬಂದು ನೋಡುತ್ತಾಳೆ; ನಾರದರು! ಅವರನ್ನು ಕಂಡಕೂಡಲೆ ಸಾದರದಿಂದ ನಮಸ್ಕರಿಸಿ ಆಸನದಮೇಲೆ ಕುಳ್ಳಿರಿಸಿ ಪಾದಪೂಜೆಮಾಡಿ ಭೋಜನ ಮಾಡಬೇಕೆಂದು ವಿನಯದಿಂದ ಪ್ರಾರ್ಥಿಸಿದಳು. ಆಗ್ಗೆ ಅತ್ರಿಋಷಿಗಳು ಮಧ್ಯಾಹ್ನದ ಸ್ನಾನಕ್ಕೆ ಹೋಗಿದ್ದರು. ನಾರದರು— "ಮಾತೇ, ನಾನು

ಭೋಜನ ಮಾಡುವದಿಲ್ಲ. ಈ ಕಡಲೆಗಳನ್ನಷ್ಟು ಪಾಕಮಾಡಿ ಕೊಡು" ಎಂದರು. ಅನಸೂಯೆಯು ಅವುಗಳನ್ನು ತೆಗೆದುಕೊಂಡು ನೋಡುತ್ತಾಳೆ; ಅವು ಉಕ್ಕಿನ ಕಡಲೆಗಳು! ಆದರಿಂದ ಮನಸ್ಸಿನಲ್ಲಿ ಚಿಂತಿಸಿ, ದೇವರನ್ನು ಸ್ಮರಿಸಿ, ಪತಿಯ ಮೇಲಿನ ನಿಜಭಕ್ತಿಯಿಂದ ಪತಿಯ ಚರಣತೀರ್ಥವನ್ನು ತಂದು ಅವುಗಳ ಮೇಲೆ ಸಿಮ್ಮಡಿಸಲು ಪಾತಿವ್ರತ್ಯವೆಂಬ ಅಗ್ನಿಯಿಂದ ಕಡಲೆಕಾಳುಗಳು ಆನಂದದಿಂದ ನಗುತ್ತವೇನೋ ಎಂಬಂತೆ ಪಟ್ ಪಟ್ ಬಾಯಿ ಬಿಚ್ಚಿದವು. ಅದನ್ನು ಕಂಡು ಅನಸೂಯೆಯು ಹರುಷಿತಳಾಗಿ ಮುನಿಯ ಮುಂದೆ ಇಟ್ಟಳು. ನಾರದರು--"ತಾಯಿ! ನಾನು ದೇವಲೋಕಕ್ಕೆ ಹೋಗಿಬರುತ್ತೇನೆ"ಂದು ಕೈಮುಗಿದರು. ಅನುಸೂಯೆಯು ನಾರದರ ಪಾದಕ್ಕೆ ನಮಸ್ಕರಿಸಿ ಅಪ್ಪಣೆ ಕೊಡಲು ನಾರದರು " ನೀನೇ ದಯಾಳೊ ನಿರ್ಮಲ ಚಿತ್ತ ಗೋವಿಂದ! ನಿಗಮಾಗೋಚರ ಮುಕ್ಕುಂದಾ " ಎಂದು ಗಾಯನ ಮಾಡುತ್ತ ಆನಂದದಿಂದ ದೇವಲೋಕಕ್ಕೆ ತೆರಳಿದರು.

ಮೂರನೆಯ ಭಾಗ

ಗರ್ವಭಂಗ

ಸಂಜೆಯ ಐದು ಬಡೆದರೂ ಜನರು ಹೊರಗೆ ಹೋಗದೆ ಮನೆಯಲ್ಲಿಯೇ ಇದ್ದು ಬೀಸಣಿಕೆಗಳಿಂದ ಗಾಳಿಯನ್ನು ಹಾಕಿಕೊಳ್ಳುತ್ತಲೂ, ತಂಪಾದ ಪದಾರ್ಥಗಳನ್ನು ಸೇವಿಸುತ್ತಲೂ, ವಿಶ್ರಾಂತಿಯನ್ನು ಹೊಂದುತ್ತಿದ್ದರು. ಕೆಲವರು ನದೀತೀರದಲ್ಲಿರುವ ದೊಡ್ಡದೊಡ್ಡ ವೃಕ್ಷಗಳ ಛಾಯೆಯಲ್ಲಿ ಕುಳಿತು ಮಂದಮಾರುತನ ಸ್ಪರ್ಶದಿಂದ ಬಿಸಲ ತಾಪವನ್ನು ಕಳೆದುಕೊಳ್ಳುತ್ತಿದ್ದರು. ಬೇರೆ ಹಲವರು ತಂಪಾದ ನೀರಿನಲ್ಲಿ ಲಿಂಬೇಹಣ್ಣಿನ ರಸ,

ಸಕ್ಕರೆ ಬೆರಿಸಿ ಕುಡಿಯಹತ್ತಿದ್ದರು. ತೆಂಗಿನ ಎಳೆ ನೀರನ್ನು ಕುಡಿದು ಶಾಂತರಾಗುತ್ತಿದ್ದರು. ದೊಡ್ಡದೊಡ್ಡ ಬಂಡೆಗಲ್ಲುಗಳ ಮೇಲೆ ಕುಳಿತು ತಂಗಾಳಿಗೆ ಮೈಯೊಡ್ಡಿ ಎಷ್ಟೋ ಜನರು ಶಾಂತಚಿತ್ತರಾಗಿದ್ದರು. ಆ ಬಂಡೆಗಳ ಮಧ್ಯದಲ್ಲಿ ಉಸುಬಿನ ಬೈಲಿನ ಹತ್ತಿರ ಸ್ವರ್ಗಾಧಿಪತಿಯಾದ ದೇವೇಂದ್ರನದೊಂದು ಸುವರ್ಣಮಯ ಲತಾಮಂಟಪವಿತ್ತು. ಅಲ್ಲಿ ವಿಶಾಲವಾದ ವೃಕ್ಷಗಳ ತಂಗಾಳಿಯಿಂದಲೂ, ನಾನಾಬಗೆಯ ಪುಷ್ಪಗಳ ಸುವಾಸನೆಯಿಂದಲೂ, ತರತರದ ರತ್ನಕಾಂತಿಗಳಿಂದಲೂ ಆಮಂಟಪವು ಶೋಭಿಸುತ್ತಿತ್ತು. ಆದರಲ್ಲಿಯ ಕಂಬಗಳಲ್ಲಿ ಸುವರ್ಣಮಯವಾದ ಗಿಳಿ, ನವಿಲು, ಕೋಕಿಲೆ, ಸಾರಂಗ ಮೊದಲಾದ ಸುಂದರ ಪುತ್ಥಳಿಗಳು ಪ್ರೇಕ್ಷಕರ ಮನಸ್ಸನ್ನು ಸೆಳೆಯುತ್ತಿದ್ದವು. ಅಲ್ಲಲ್ಲಿ ಸ್ತ್ರೀಯರು ಗುಂಪುಗುಂಪಾಗಿ ಕೂಡಿ ಅನೇಕ ಮಾತುಗಳನ್ನಾಡುತ್ತಿದ್ದರು. ಬೇರೊಂದು ಕಡೆಯಲ್ಲಿ ಪುರುಷರು ಕೂಡಿ ಕುಳಿತು, ತಮತಮಗೆ ಇಷ್ಟವಾದ ವಿಷಯಗಳನ್ನು ಮಾತಾಡುತ್ತಿದ್ದರು. ವಾಚಕರೇ! ನಾವು ಮೊದಲು ಸ್ತ್ರೀಯರ ಕಡೆಗೆ ಹೋಗುವಾ.

ಪಾರ್ವತಿ— "ನಾವೆಂದರೆ ನಾರದರಿಗೆ ನೊರಜು ಕಂಡಂತಾಗಿದೆ. ಆ ಕೀಳ ಋಷಿಪತ್ನಿಯೆಲ್ಲಿ? ದೇವಲೋಕವನ್ನಾಳುವ ನಾವೆಲ್ಲಿ?" ಎಂದು ಮಾತಾಡುವಷ್ಟರಲ್ಲಿಯೇ ನಡುವೆ ಸರಸ್ವತಿಯು ಬಂದು— "ನನ್ನಿಂದಲೇ ಇವರು ಇಷ್ಟು ಮುಂದೆ ಬಂದದ್ದು. ನಾನಿಲ್ಲದಿದ್ದರೆ ಇವರನ್ನು ಯಾರು ಕೇಳುತ್ತಿದ್ದರು?" ಹೀಗೆಂದು ಮಾತಾಡುವಷ್ಟರಲ್ಲಿ ಲಕ್ಷ್ಮಿಯು—"ನನ್ನಿಂದಲೇ ರಾಜ್ಯ, ಧನ, ಮಾನ, ಮರ್ಯಾದೆ, ಬಂಧುಬಳಗ" ಹೀಗೆಂದು ಗರ್ವದಿಂದ ಮಾತಾಡುವಷ್ಟರಲ್ಲಿ ಮಂಜುಳವಾದ ಗಾಯನಸ್ವರವು ಕೇಳಿಸಿತು. ಮೊದಲೇ ಗಾಯನಪ್ರಿಯಳಾದ ಸರಸ್ವತಿಯು ಅಹಹಾ! " ಈ ನಾದವು ಎಷ್ಟು ಮಧುರವಾಗಿದೆ, ನೋಡಿದಿಯಾ!" ಎಂದು ಲಕ್ಷ್ಮೀದೇವಿಯಂದಳು. "ಅಹುದು; ನಾದವು ಬಹು ಇಂಪಾಗಿದೆ" ಎಂದು ಪಾರ್ವತಿಯು ಹಾಸ್ಯಮುಖದಿಂದ ನುಡಿದಳು. ಈ ಗಾಯನವನ್ನು ಬ್ರಹ್ಮ, ವಿಷ್ಣು, ರುದ್ರಾದಿಗಳು ಸಹ ಕೇಳಹತ್ತಿದರು.

॥ಪದ॥ ಸ್ಮರಣೆಯೊಂದೆ ಸಾಲದೆ। ಗೋವಿಂದನ ನಾಮವೊಂದೇ ಸಾಲದೆ। ಪಾತಕಿ ಆದರೇನು। ಸರ್ವಪ್ರಾಣಘಾತಕಿಯಾದರೇನು? ॥

ಎಂಬ ಪದವನ್ನು ಅನ್ನುತ್ತ ನಾರದರು ಮುಂದೆ ಬಂದು ನಿಂತರು. ವಿಷ್ಣು ಮಹೇಶ್ವರರು ಮನದಲ್ಲಿ ನಗುತ್ತ ಇವರು ಏನೋ ಕಲಹ ಹಚ್ಚಲಿಕ್ಕೆ ಬಂದಿರಬಹುದೆಂದು ಊಹಿಸಿ, ಆಸನದಿಂದೆದ್ದು ನಾರದರನ್ನು ಕುಳ್ಳಿರಿಸಿ ಪಾದಪೂಜೆಯನ್ನು ಮಾಡಿ ಮೈಗೆ ಸುಗಂಧವನ್ನು ಲೇಪಿಸಿ. ಸಕಲ ಲೋಕಗಳ ವಾರ್ತೆಗಳನ್ನು ಕೇಳಹತ್ತಿದರು. ಆಗ ನಾರದರು ಎಲ್ಲ ಕುಶಲವಾರ್ತೆಯನ್ನು ಹೇಳಿ ತಮ್ಮ ಜೋಳಿಗೆಯೊಳಗಿನ ಪಾಕವಾಗದೇ ಇದ್ದ ಕಡಲೆಗಳನ್ನು ತೆಗೆದು ಲಕ್ಷ್ಮೀ, ಸರಸ್ವತಿ, ಪಾರ್ವತಿ ಮೊದಲಾದ ಸ್ತ್ರೀ ಸಮೂಹದ ಮುಂದೆ ಇಟ್ಟು ಇವುಗಳನ್ನು ಪಾಕಮಾಡಿಕೊಡಿರೆಂದು ಹೇಳಿದರು. ಅವರೆಲ್ಲರು ಆ ಕಡಲೆಗಳನ್ನು ಕೈಯಲ್ಲಿ ತಕ್ಕೊಂಡು ನೋಡುತ್ತಾರೆ; ಅವು ಉಕ್ಕಿನವು! ಸ್ತ್ರೀಯರ ಸಮೂಹವೆಲ್ಲವು ನಾರದರಿಗೆ ಹಾಸ್ಯಮಾಡಿ ನಗಹತ್ತಿತು. ಪುರುಷರು ಸಹ, ಉಕ್ಕಿನ ಕಡಲೆಗಳನ್ನು ಯಾರಾದರೂ ಪಾಕಮಾಡಬಹುದೆ? ಎಂದು ಲೌಕಿಕ ಜನರಂತೆ ಮಾತಾಡಹತ್ತಿದರು. ಇದನ್ನು ಕೇಳಿ ನಾರದರು ತಮ್ಮ ಜೋಳಿಗೆಯೊಳಗಿಂದ ಅನಸೂಯೆಯು ಪಾಕಮಾಡಿಕೊಟ್ಟ ಕಡಲೆಗಳನ್ನು ಎಲ್ಲರ ಮುಂದೆ ಇಟ್ಟು, "ಮೊನ್ನಿನ ಸಭೆಯಲ್ಲಿ ಮಾತಾಡಿದ ನನ್ನ ಹಟವೇ ಮೇಲಾಯಿತು. ನೀವೆಲ್ಲರೂ ಇವುಗಳನ್ನು ಮೆಲ್ಲಿರಿ. ಇವುಗಳನ್ನು ಆ ಪತಿವ್ರತೆಯೇ ಪಾಕಮಾಡಿರುವಳು. ಪಾತಿವ್ರತ್ಯವೆಂದರೆ ಸಾಧಾರಣವೆ? ಅಗ್ನಿನಾರಾಯಣನು ಸಹ ಗದಗದ ನಡುಗುವನು. ಈ ವಿಷಯವಾಗಿ ನಿಮ್ಮೆಲ್ಲರಿಗೆ ನಾನು ಭೂಲೋಕದಲ್ಲಿ ನೋಡಿದ ಒಂದು ಸೋಜಿಗದ ಸಂಗತಿಯನ್ನು ಹೇಳುತ್ತೇನೆ; ಈಗ ಸಾಯಂಕಾಲ ಸಮಯ; ನಾವು ಸಂಧ್ಯಾ-ಉಪಾಸನೆಗಾಗಿ ನದೀತೀರಕ್ಕೆ ಹೋಗುವೆವು. ನಾಳೆ ಇದೇ ಸಮಯಕ್ಕೆ ನೀವೆಲ್ಲರೂ ಇಲ್ಲಿಗೆ ಬರತಕ್ಕದ್ದೆ"ಂದು ಹೇಳಿ ಹೊರಟುಹೋದರು. ಎಲ್ಲರೂ ತಮ್ಮತಮ್ಮ

ಮನೆಗಳಿಗೆ ಹೋದರು. ಬೆಳಗು ಯಾವಾಗ ಆದೀತು, ನಾರದರ ಮುಖ ದಿಂದ ಪುಣ್ಯ ಚರಿತ್ರೆಯನ್ನು ಯಾವಾಗ್ಗೆ ಕೇಳೇವೆಂಬ ತದೇಕ ಧ್ಯಾನದಿಂದ ಆ ರಾತ್ರಿಯನ್ನು ಬಹಳ ಕಷ್ಟದಿಂದ ಕಳೆಯಹತ್ತಿದರು. ಲಕ್ಷ್ಮಿ, ಸರಸ್ವತಿ, ಪಾರ್ವತಿಯವರು ತಮ್ಮ ಗರ್ವಭಂಗಕ್ಕಾಗಿ ಬಹಳೇ ಚಿಂತಾಕ್ರಾಂತರಾಗಿ ಪತಿಗಳ ಸಂಗಡ ಮಾತನಾಡದೆ ಹಂಸತೂಲಿಕೆಯ ಮೇಲೆ ಮಲಗಿದರು.

ನಾಲ್ಕನೆಯ ಭಾಗ

ಚಿಕ್ಕ ಕಥೆ

ಮರುದಿನ ಸಾಯಂಕಾಲಕ್ಕೆ ಸರಿಯಾಗಿ ಎಲ್ಲರೂ ಬಂದರು. ಆದರೆ ಸರಸ್ವತಿ, ಲಕ್ಷ್ಮಿ, ಪಾರ್ವತಿದೇವಿಯರು ಮಾತ್ರ ಇನ್ನೂ ಬಂದಿದ್ದಿಲ್ಲ. ಎಲ್ಲರೂ ಅವರ ಮಾರ್ಗವನ್ನೇ ನಿರೀಕ್ಷಿಸುತ್ತಿದ್ದರು. ಅಷ್ಟರಲ್ಲಿ ಅವರೂ ಬಂದರು. ನಂತರ ಎಲ್ಲರೂ ತಮ್ಮ ತಮ್ಮ ಆಸನಗಳ ಮೇಲೆ ಕುಳಿತರು. ನಾರದರು ಆ ಚಿಕ್ಕ ದೃಷ್ಟಾಂತವನ್ನು ಹೇಳಲಾರಂಭಿಸಿದರು. ಎಲ್ಲರೂ ಶಾಂತಚಿತ್ತದಿಂದ ಕೇಳಹತ್ತಿದರು:

ಒಂದು ಊರಲ್ಲಿ ಕುಲಕರ್ಣಿ ಮನೆತನದಲ್ಲಿ ಗಂಡ, ಹೆಂಡತಿ, ಒಂದು ಕೂಸು ಹೀಗೆ ಮೂರು ಜನರಿದ್ದರು. ಆ ಸಾಧ್ವಿಯ ಹೆಸರು ಸುಶೀಲಾಬಾಯಿ ಕೂಸು ಆರುತಿಂಗಳದ್ದಿತ್ತು. ಆ ಸಾಧ್ವಿಯು ಯಾವಾಗಲೂ ತನ್ನ ಪತಿ ಸೇವೆಯಲ್ಲಿಯೇ ತತ್ಪರಳಾಗಿರುತ್ತಿದ್ದಳು. ತನ್ನ ಪತಿಗೆ ಎಳ್ಳುಕಾಳಷ್ಟು ತೊಂದರೆಯಾಗದಂತೆ ಯಾವಾಗಲೂ ಜಾಗರೂಕಳಾಗಿದ್ದಳು ಹೆಣ್ಣು

ಮಕ್ಕಳಿಗೆ ಪತಿಯೇ ದೇವರೆಂದು ತಿಳಿದು ಅವರಂತೆ ವರ್ತಿಸುತ್ತಿದ್ದಳು. ದೇವರು ಈಕೆಯ ಪತಿವ್ರತಾ ಧರ್ಮವನ್ನು ಒರೆಗೆ ಹಚ್ಚಲಿಕ್ಕೆ ಒಂದು ಆಶ್ಚರ್ಯಕರವಾದ ಸಂಗತಿಯನ್ನೊದಗಿಸಿದನು.

ಒಂದು ದಿನ ಮಧ್ಯಾಹ್ನ ಸಮಯ; ಸುಶೀಲಾಬಾಯಿಯು ತನ್ನ ಮುದ್ದು ಕೂಸನ್ನಾಡಿಸುತ್ತ ಪಡಸಾಲೆಯಲ್ಲಿ ನಿಂತಿದ್ದಳು. ಅವಳ ಗಂಡನು ಉಂಡು ಚಾವಡಿಗೆ ಹೋಗಿದ್ದನು. ಅವಸಿಗೆ ಒಮ್ಮಿಂದೊಮ್ಮೆ ಹೊಟ್ಟಿಕಡಿತವೆದ್ದು ಚಾವಡಿಯಿಂದ ಚಡಪಡಿಸುತ್ತ ಮನೆಗೆ ಬಂದನು. ಅದನ್ನು ಸುಶೀಲಾಬಾಯಿಯು ನೋಡಿ ಗಾಬರಿಯಾಗಿ, ಕೂಸನ್ನು ತೊಟ್ಟಿಲಲ್ಲಿ ಮಲಗಿಸಿ ತೂಗುತ್ತ ಒಂದೇ ಕೈಯಿಂದ ತನ್ನ ಪತಿಗೆ ಔಷಧೋಪಚಾರ ಮಾಡಹತ್ತಿದಳು. ಹೊಟ್ಟೆನೋವು ಹೆಚ್ಚಾಗಹತ್ತಿತು. ಅದನ್ನು ಕಂಡು ಕುಪ್ಪಡಿಗೆಯಲ್ಲಿ ಬೆಂಕಿಯನ್ನು ಹೊತ್ತಿಸಿ ಪತಿಯ ಹೊಟ್ಟೆಯನ್ನು ಕಾಸಹತ್ತಿದಳು. ಕೂಸಿಗೆ ತುಸು ಜಂಪು ಹತ್ತಿತು. ಇದರಿಂದ ತನ್ನ ಪತಿ ಸೇವೆಗೆ ಅನುಕೂಲವಾಯಿತೆಂದು ಸಂತೋಷಬಟ್ಟು ಪತಿಯ ತಲೆಯನ್ನು ತನ್ನ ತೊಡೆಯಮೇಲಿಟ್ಟುಕೊಂಡು ಕಾಸಹತ್ತಿದಳು. ಇದರಿಂದ ಹೊಟ್ಟೆ ಕಡಿತವು ಕಡಿಮೆಯಾಗಿ ನಿದ್ರೆ ಹತ್ತಿತು. ಅಷ್ಟರಲ್ಲಿ ತೊಟ್ಟಿಲಲ್ಲಿ ಮಲಗಿದ ಕೂಸಿಗೆ ಎಚ್ಚರಾಗಿ ಉಲುಕಾಡಹತ್ತಿತು. ಕೂಸನ್ನು ಕರಕೊಂಡರೆ ಪತಿಯ ನಿದ್ರಾಭಂಗವಾಗುವದೆಂದು ಸ್ವಲ್ಪವೂ ಉಲುಕಾಡದೆ ಸ್ವಸ್ಥ ಕುಳಿತಳು. ಕೂಸು ಗಾ, ಗೂ, ಎಂದು ಆಡಲಾರಂಭಿಸಿತು. ಇದರಿಂದ ಆ ಸಾಧ್ವಿಗೆ ಒಂದು ಬಗೆಯಿಂದ ಆನಂದವೂ, ಬೇರೊಂದು ಬಗೆಯಿಂದ ಚಿಂತೆಯೂ ಒಂದೇ ಕಾಲಕ್ಕೆ ಉಂಟಾದವು. ಚಿಂತೆಯೆಂದರೆ, ಕೂಸು ಎದ್ದು ತೊಟ್ಟಿಲ ಹತ್ತರ ಪ್ರಜ್ವಲಿತವಾದ ಕುಪ್ಪಡಿಗೆಯನ್ನು, ಎಲ್ಲಿ ಬಗ್ಗಿ ನೋಡುವದೋ! ಸಂತೋಷವೆಂದರೆ, ಪತಿಸೇವೆಗೆ ತ್ರಾಸವಾಗದೆ ಆ ಕೂಸು ಆಡಹತ್ತಿರುವದು! ಇಷ್ಟರಲ್ಲಿ ಆ ಕೂಸು ಎದ್ದು ಕುಳಿತುಕೊಂಡಿತು. ಆಗ ಆ ಸಾಧ್ವಿಯ ಕಣ್ಣೆಲ್ಲ ಅದರಕಡೆಗೇ ಇದ್ದವು. ಆದರೂ ಕೂಡ ಆಕೆಯು ಉಲುಕಾಡಲಿಲ್ಲ. ಪತಿಗೆ ಎಲ್ಲಿ ತ್ರಾಸವಾಗುವದೋ ಎಂದು ನೋಡುವಷ್ಟರಲ್ಲಿ ಆ ಮಗುವು

ತೊಟ್ಟಿಲದ ಹಗ್ಗ ಹಿಡಿದು ಒಂದುಕಾಲು ಹೊರಗೆಹಾಕಿ, ಯಕ್ಕಿಯ ಮೇಲೆ ಕುಳಿತುಕೊಂಡಿತು. ಎಲ್ಲಿ ಬಾಗುವದೋ ಎಂಬುವಷ್ಟರಲ್ಲಿಯೇ ಬಿದ್ದೇ ಬಿಟ್ಟಿತು. ಹಾಯ್! ಹಾಯ್! ಪ್ರಜ್ವಲವಾದ ಅಗ್ನಿಯಲ್ಲಿ ಬಿದ್ದರೂ ಆ ಸಾಧ್ವಿಯು ತನ್ನ ಸ್ಥಳಬಿಟ್ಟು ಕದಲಲಿಲ್ಲ. ವಾಚಕರೇ! ನೀವು ಆ ಸಾ-ಧ್ವಿಯ ಹೃದಯವು ಎಷ್ಟೋ ಕಠಿಣವೆಂದು ಸಹಜವಾಗಿ ಅನ್ನಬಹುದು. ನಾವಾದರೆ ಅಯ್ಯೋ ಕೂಸು ಸತ್ತಿತೆಂದು ಬಡಕೊಂಡು ಪತಿಸೇವೆಯು ಘಟಿಸದೆ ಅಗ್ನಿಯು ಪ್ರೀತನಾಗದೆ ಕೂಸನ್ನು ಕಳಕೊಂಡು ಕೂಡ್ರಬಹುದಲ್ಲವೇ? ಆದರೆ ಅಗ್ನಿಯಲ್ಲಿ ಬಿದ್ದ ಕೂಸು ಕೈಬಿಚ್ಚಿ ಆಡಹತ್ತಿತ್ತು. ಪಾತಿವ್ರತ್ಯವೆಂದರೆ ಸಾಮಾನ್ಯವೇ? ಪಾತಿವ್ರತ್ಯವು ಅಗ್ನಿಯನ್ನೇ ಸುಟ್ಟುಬಿಡಬಹುದು. ಅದರಿಂದ ಅಗ್ನಿನಾರಾಯಣನು ಶಾಂತನಾಗಿ ಮಗುವನ್ನು ಆಡಿಸಹತ್ತಿದನು. ಅಗ್ನಿಯು ಕೂಸಿನ ಮೈಯನ್ನು ಸ್ವಲ್ಪವೂ ದಹಿಸದೇ ಇದ್ದದ್ದನ್ನು ಕಂಡು ಎಲ್ಲರೂ ಆಕೆಯ ಪತಿಭಕ್ತಿಗೆ ಮೆಚ್ಚಿ, ಅಗ್ನಿದೇವರು ಶಾಂತನಾದನೆಂದರು., ಸ್ತ್ರೀಯರೇ, ಸುಶೀಲಾಬಾಯಿಯು ಕಠಿಣಹೃದಯದವಳೆನ್ನುವಿರೋ? ಛೀ ಅಲ್ಲ ಅಲ್ಲ! ಶಾಂತಚಿತ್ತಳು. ಇದನ್ನು ಕೇಳಿ ಎಲ್ಲರೂ ನಾರದರ ಕಥೆಗೆ ತಲೆದೂಗಿದರು. ಅನಸೂಯೆಯಾದರೂ ಮಹಾಪತಿವ್ರತೆಯೆನ್ನುತ್ತ ಅಂದಿನ ಸಭಾವಿಸರ್ಜನೆಯಾಯಿತು. ಎಲ್ಲರೂ ಅನಸೂಯೆಯ ಪತಿವ್ರತಾ ಮಹಾತ್ಮೆಯನ್ನು ಕೊಂಡಾಡುತ್ತ ಮನೆಗೆ ಹೋದರು. ನಾರದರು ತಮ್ಮ ಮಾತೇ ಮೇಲಾದ್ದರಿಂದ ಆನಂದವುಳ್ಳವರಾಗಿ ಲೋಕಸಂಚಾರಕ್ಕೆ ಹೊರಟುಹೋದರು. ಎಲ್ಲಿ ನೋಡಿದರೂ ಇದೇ ವಾರ್ತೆಯು. ಆದರೆ ಈ ಮೂವರಿಗೆ ಮಾತ್ರ ಸೈರಣೆಯಾಗದೆ ಚಿಂತಾಕ್ರಾಂತರಾಗಿ ಮಲಗಿಕೊಂಡರು.

ಐದನೆಯ ಭಾಗ

ಮುನಿಯ ರೂಪ

ಅಂದು ಪೌರ್ಣಿಮೆಯಾದ್ದರಿಂದ ಚಂದ್ರನು ಬಹುಬೇಗ ಉದಯಿಸಿದನು. ಅವನ ಕಾಂತಿಯಿಂದಲೂ, ನಾನಾಬಗೆಯ ರತ್ನಗಳ ಪ್ರಕಾಶದಿಂದಲೂ ಅಂತಃಪುರವು ಶೋಭಿಸುತ್ತಿತ್ತು, ಗೋಡೆಗಳ ಮೇಲೆ ಬಗೆಬಗೆಯ ಬಣ್ಣಗಳಿಂದ ತೆಗೆದ ಬಳ್ಳಿಗಳೂ ವನಸೌಂದರ್ಯವೂ ನೋಡುವವರನ್ನು ಆನಂದಗೊಳಿಸುತ್ತಿದ್ದವು. ದಾಸಿಯರು ತಮ್ಮ ನೂಪುರಗಳ ಸಪ್ಪಳಮಾಡದೆ ಮೆಲ್ಲನೆ ಸಿಡಿದೋಳೆತ್ತಿ ಬಂಗಾರದ ಹಿಡಿಕೆಯ ಚವರದಿಂದ ಗಾಳಿಯನ್ನು ಹಾಕುತ್ತಿದ್ದರು.

ಅಷ್ಟರಲ್ಲಿ ಅವರ ಪತಿಗಳು ತಮ್ಮ ಹೆಂಡಂದಿರ ಗರ್ವ ಖಂಡನವಾಗಿ ಅಸಮಾಧಾನದಿಂದ ಇದ್ದದ್ದಕ್ಕೆ ಸಮಾಧಾನ ಹೇಳುವದಕ್ಕಾಗಿ ಅಂತಃಪುರಕ್ಕೆ ಬಂದರು. ಅವರನ್ನು ಕಂಡಕೂಡಲೆ ದಾಸಿಯರು ತಮ್ಮ ತಮ್ಮ ಸ್ಥಾನಕ್ಕೆ ಹೋಗಿ ಮಲಗಿಕೊಂಡರು. ಪತಿಗಳು ಬಂದದು ಕಂಡು ಮಾತನಾಡದೆ ಇರಲು, ಅವರಿಗೆ ಅನೇಕರೀತಿಯಿಂದ ಸಮಾಧಾನ ಹೇಳಿದರೂ, ಅದರಿಂದ ಉಪಯೋಗವಾಗಲಿಲ್ಲ. ತಮ್ಮ ಮಾತು ನಡೆಯದ ವಿನಾ ಅನ್ನ ಮುಟ್ಟುವದಿಲ್ಲವೆಂದು ನಿರ್ಧಾರ ಹಿಡಿದರು. ಇದನ್ನು ಕಂಡು ಕನಿಕರಪಟ್ಟು ನಿಮ್ಮ ಮಾತು ನಡಿಸುತ್ತೇವೆಂದು ಪತಿಗಳು ವಚನ ಕೊಟ್ಟರು. ಆದರೆ ಈ ಮಾತು ಅಸಂಭವ ತೋರಿದ್ದರಿಂದ ಕಿವಿಗಳ ಮೇಲೆ ಕೈಯನ್ನಿಟ್ಟುಕೊಂಡು, "ಇದರಿಂದ ನಿಮಗೆ ಸುಖವಾಗದು; ಆ ಸಾಧ್ವಿಯ ಪರೀಕ್ಷೆಯಿಂದ ನಿಮಗೆ ಬಹಳ ತ್ರಾಸವಾದೀತು" ಎಂದು

ಅನೇಕ ರೀತಿಯಿಂದ ಬೋಧಿಸಿದರೂ ಕೇಳದೇಹೋದದ್ದರಿಂದ ಉಪಾಯ ಗಾಣದೆ ವಚನವನ್ನು ಪೂರೈಸುವದಕ್ಕಾಗಿ ನುರುದಿವಸ ಸೂರ್ಯೋದಯಕ್ಕೆ ಎಲ್ಲರೂ ಸ್ನಾನಸಂಧ್ಯಾದಿ ಕರ್ಮಗಳನ್ನು ನೆರವೇರಿಸಿಕೊಂಡು ಇದೇ ರೂಪದಿಂದ ಹೋದರೆ ಆ ಸಾಧ್ವಿಯು ಶಾಪ ಕೊಟ್ಟಾಳೆಂಬ ಸಂಶಯದಿಂದಲೂ ಪಾತಿವ್ರತ್ಯವೆಂಬ ಅಗ್ನಿಯಿಂದ ಭಸ್ಮವಾದೇವೆಂಬ ಭೀತಿಯಿಂದಲೂ, ತಮ್ಮತಮ್ಮ ನಿಜರೂಪವನ್ನು ಬಿಟ್ಟು ಮುನಿಗಳ ವೇಷವನ್ನು ತೊಟ್ಟು ಕೃಷ್ಣಾಜನದ ಸುರುಳಿಯನ್ನು ಕಂಕುಳಲ್ಲಿಟ್ಟುಕೊಂಡು ರುದ್ರಾಕ್ಷ ಮಾಲೆಗಳಿಂದ ಭೂಷಿತರಾಗಿ ಮೈಗೆ ಭಸ್ಮ ಲೇಪಿಸಿಕೊಂಡು ಜಡೆಯನ್ನು ಸುತ್ತಿ ಒಂದು ಕೈಯಲ್ಲಿ ಗೋಮುಖವನ್ನೂ, ಮತ್ತೊಂದು ಕೈಯಲ್ಲಿ ಜಪಮಾಲೆಯನ್ನೂ ಹಿಡಿದುಕೊಂಡು ಪರ್ಣಕುಟಿರದ ಮಾರ್ಗವನ್ನು ಹಿಡಿದರು.

ಆರನೆಯ ಭಾಗ

ಸತ್ವ ಪರೀಕ್ಷೆ

ಅಷ್ಟದಿಕ್ಪಾಲಕರು ತಮ್ಮ ಶೀತಳವಾದ ಛಾಯೆಯನ್ನು ಮುದುಡಿಕೊಳ್ಳಹತ್ತಿದರು. ಕೋಳಿಗಳು ಕೂಗಿ ಜನರನ್ನೆಬ್ಬಿಸಹತ್ತಿದವು. ಚಕೋರವು ಮಂಜುಳಧ್ವನಿ ಗೈಯಹತ್ತಿತು, ಪಕ್ಷಿಗಳ ಕಿಲಿಕಿಲಿಧ್ವನಿಮಾಡಹತ್ತಿದವು. ಆಕಾಶಾಂಗನೆಯು ಹೊಂಬಣ್ಣದ ಪತ್ತಲವನ್ನು ಉಟ್ಟಳು. ನವಿಲುಗಳು ತಮ್ಮ ರೆಕ್ಕೆಗಳನ್ನು ಪಚರಿಸಿ ಆಡಹತ್ತಿದವು. ಗೂಗೆಗಳು ತಮ್ಮ ಗೂಡುಸೇರಿದವು. ಗಿಳಿ ಹಂಸ ಮೊದಲಾದ ಪಕ್ಷಿಗಳು ತಮ್ಮತಮ್ಮ ಆಹಾರಕ್ಕಾಗಿ ಹೊರಟವು. ಭೂಲೋಕದ ವೈಭವವನ್ನು ನೋಡುವದಕ್ಕೆ ಸೂರ್ಯನಾರಾಯಣನು ಉದಯವಾದನು. ಅದೇ ಸಮಯದಲ್ಲಿ ಅತ್ರಿ

ಋಷಿಗಳ ಪರ್ಣಕುಟೀರದ ಹತ್ತಿರ ನದೀತೀರದಲ್ಲಿ ಮುನಿಗಳು ಗುಂಪು
ಗುಂಪಾಗಿ ನೆರೆದಿದ್ದರು. ಕೆಲವರು ಸೂರ್ಯನಾರಾಯಣನಿಗೆ ಅರ್ಘ್ಯ
ಕೊಡುತ್ತಿದ್ದರು. ಕೆಲವರು ಜಪಮಾಡುತ್ತಿದ್ದರು. ಕೆಲವರು ಕೆಲವರು
ತಮ್ಮ ನಿತ್ಯಕರ್ಮಗಳನ್ನು ನೆರವೇರಿಸಿಕೊಂಡು ಹೋಮಕುಂಡದಕಡೆಗೆ
ಸಾಗಿದ್ದರು. ಬೇರೆ ಕೆಲವರು ತಮ್ಮ ಪರ್ಣಕುಟೀರಗಳಕಡೆಗೆ ಸಾಗಿದ್ದರು.
ಅತ್ರಿಋಷಿಗಳು ತಮ್ಮ ಕುಟೀರಕ್ಕೆ ಬಂದು ಹೋಮಶಾಲೆಯಲ್ಲಿ ಮಾಡಿದ
ಎಲ್ಲ ಸಿದ್ಧತೆಯನ್ನು ನೋಡಿ ಮುನಿವಟುಗಳೊಡನೆ ಹೋಮಮಾಡಲಾ
ರಂಭಿಸಿದರು. ಅನಸೂಯಾದೇವಿಯು ನಸುಕಿನಲ್ಲಿದ್ದು ಪತಿಗೆ ನಮಸ್ಕ
ರಿಸಿದಳು. ಪತಿಯು ಸ್ನಾನಕ್ಕೆ ಹೋಗಲು, ಮನೆಗೆಲಸವನ್ನು ಮುಗಿಸಿ
ಹೋಮಸಿದ್ಧತೆಯನ್ನು ಮಾಡಿ ಪಾಕಮಾಡಹತ್ತಿದಳು. ಸೂರ್ಯ
ನಾರಾಯಣನ ಪ್ರಖರವಾದ ಬಿಸಲಿನ ತಾಪದಿಂದ ದಾರಿಕಾರರು ನೀರ
ಡಿಸಿ ಜಲಾಶಯಗಳನ್ನು ಹುಡುಕಹತ್ತಿದರು. ಅಂಥ ಸಮಯದಲ್ಲಿ
ಅನಸೂಯಾದೇವಿಯಿದ್ದ ಗುಡುಸಲಿನ ಬಾಗಿಲಿಗೆ ಮೂರುಮಂದಿ ಅತಿಥಿ
ಗಳು ಬಂದರು. ಗುಡುಸಲಿನಲ್ಲಿ ಯಾರ ಗದ್ದಲವೂ ಕೇಳದ್ದರಿಂದ ಬಾಗಿ
ಲಲ್ಲಿಯೇ ನಿಂತು "ತಾಯೀ, ಭಿಕ್ಷಾಂದೇಹಿ" ಎಂದು ಒದರಿದರು.
ಅನಸೂಯೆಯು ಹೊರಗೆ ಬಂದು ನೋಡುತ್ತಾಳೆ, ಮನ್ಮಥಾಕಾರದ
ಮೂವರು ಋಷಿಗಳು ನಿಂತಿದ್ದರು! ಅವರು ಬಂದದ್ದನ್ನು ಪತಿಯ
ಮುಂದೆ ತಿಳಿಸಲು, ಅವಕಾಶವಿಲ್ಲದ್ದರಿಂದ ಒಳಗೆ ಕರೆದು ಕಾಲುತೊಳೆ
ದು ಉಪಚರಿಸಿದಳು. ಆಗ ಆ ಮುನಿಗಳು "ತಾಯಿ, ನಾವು ದೂರ
ದೇಶದಿಂದ ಬಿಸಿಲೊಳಗೆ ಬಳಲಿ ಹಸಿದು ಬಂದಿದ್ದೇವೆ. ನಮ್ಮ ಕ್ಷುದಾ
ಶಾಂತಿಯನ್ನು ಶೀಘ್ರ ಮಾಡು" ಎಂದರು. ಅನಸೂಯಾದೇವಿಯು, ಈ
ಮುನಿಗಳು ಆರಂಭದಲ್ಲಿಯೇ ನನಗೆ ತಾಯಿಯೆಂದು ಸಂಬೋಧಿಸಿದರು.
ಇದೇ ಮಾತು ನಿಜವಾಗಲೆಂದು ದೇವರನ್ನು ಧ್ಯಾನಿಸಿ ಪತಿಸ್ಮರಣೆಮಾಡಿ
ಭೋಜನಮಾಲಿಕ್ಕೆ ಆಸನವನ್ನು ಹಾಕಿ ಬಾಳೆಯೆಲೆಯಲ್ಲಿ ತರತರದ
ಪಕ್ವಾನ್ನಗಳನ್ನು ಬಡಿಸಿ ತುಪ್ಪವನ್ನು ಹಾಕಿ "ಮಹಾನುಭಾವರೇ, ಇನ್ನು
ಭೋಜನಮಾಡತಕ್ಕದ್ದೆಂ"ದು ಪ್ರಾರ್ಥಿಸಿದಳು. ಆಗ ಆ ಕಪಟವೇಷದ

ಮುನಿಗಳು ಅನಸೂಯಾ ದೇವಿಯನ್ನು ಕುರಿತು "ನೀನು ದಿಗಂಬರಳಾಗಿ ಬಡಿಸದ ಹೊರ್ತು ನಾವು ಅನ್ನವನ್ನು ಮುಟ್ಟುವದಿಲ್ಲ" ಎಂದು ಎದ್ದು ನಿಂತರು. ಆಗ ಅವಳು ಗಾಬರಿಯಾಗಿ ಅತಿಥಿಗಳು ಉಪವಾಸ ಹೋ-ದರೆ ಬ್ರಹ್ಮಹತ್ಯಾ ದೋಷ ಬರುವದು; ಬಿಟ್ಟರೆ ನನ್ನ ಪಾತಿವ್ರತ್ಯವೇ ಭಂಗವಾಗುವದು ಎಂದು ಚಿಂತಿಸಿ ದೇವರನ್ನು ಸ್ಮರಿಸಿ ಹೋಮಶಾಲೆಗೆ ಬಂದಳು. ಅತ್ರಿಋಷಿಗಳು ಅದೇ ಹೋಮ ಕಾರ್ಯವನ್ನು ಮುಗಿಸಿಕೊಂಡು ನದಿಗೆ ಹೋಗಿದ್ದರು. ಆದರೂ ಅವಳು ಎದೆಗುಂದದೆ ಪತಿಯ ಕಮಂಡಲೋದಕವನ್ನು ತಕ್ಕೊಂಡು ಭಕ್ತಿಪೂರ್ವಕವಾಗಿ ಆ ಮೂವರ ಮೇಲೆ ಚಿಮುಕಿಸಲು ಅವಳ ಪಾತಿವ್ರತ್ಯ ಪ್ರಭಾವಕ್ಕೆ ಹರಿಹರಬ್ರಹ್ಮಾದಿಗಳು ಕೂಸುಗಳಾಗಿ ಆಡಹತ್ತಿದರು. ಅಂತರಿಕ್ಷದಲ್ಲಿ ಸುರರು ಜಯಜಯಕಾರ ಮಾಡಿ ಪೂಮಳೆ ಸುರಿಸಿದರು. ದೇವಗನ್ನಿಕೆಯರು ಆನಂದದಿಂದ ಹೊಗಳಹತ್ತಿದರು. ಕೂಸುಗಳು ಗುಡಿಸಲ ತುಂಬ ಹರಿದಾಡಹತ್ತಿದವು. ಇಂತು ಪತಿವ್ರತೆಯ ಸತ್ವಪರೀಕ್ಷೆಯಾಯಿತು!

ಏಳನೆಯ ಭಾಗ

ಬಾಲಲೀಲೆ

ಕೂಸುಗಳು ಆಡುವದನ್ನು ಕಂಡು ಅನಸೂಯೆಯು ಬಾಗಿಲವನ್ನು ಹಾಕಿ ಉಟ್ಟವಸ್ತ್ರವನ್ನು ಕಳೆದು ದಿಗಂಬರಳಾಗಿ ಮಕ್ಕಳನ್ನು ಎತ್ತಿ ಮುದ್ದಾಡಿ ಎದೆಗೆ ಅವಚಿಕೊಳ್ಳಲು ಮೊಲೆ ಹಾಲುಗಳು ಹೊರಸೂಸಿ ಚಿಮ್ಮಿದವು. ಮಕ್ಕಳಿಗೆ ಮೊಲೆಯುಣಿಸಿ, ಎಣ್ಣೆ ಪೂಸಿ, ಬಿಸಿನೀರಿನಿಂದ ಮಜ್ಜನಮಾಡಿಸಿ ದೃಷ್ಟಿತಗಲುವದೆಂದು ಉಪ್ಪು, ಬೇವನ್ನು

ಮುರಿದು ಕಪ್ಪು, ಕಾಡಿಗೆ ಹಚ್ಚಿ ಕಪ್ಪಾಜನದ ತೊಟ್ಟಿಲ ಕಟ್ಟಿ ಮೂವ
ರನ್ನೂ ಆ ತೊಟ್ಟಿಲಲ್ಲಿ ಮಲಗಿಸಿ ತೂಗುತ್ತ ಜೋಗುಳವನ್ನು ಹಾಡಹ
ತ್ತಿದಳು.

ಜೋಗುಳ ಪದವು

ಜೋ ಜೋ ಪತಿವ್ರತಾ ಮಹಿಮೆಯ ಕೇಳಿ । ಜೋ ಜೋ ನಾರ
ದ ಮುನಿಬಂದು ಹೇಳಿ । ಜೋ ಜೋ ಸ್ತ್ರೀಯರು ರೋಷವ ತಾಳಿ ।
ಬಾಲಾ । ಮಲಗಿರಿ ನೀವೆಲ್ಲ ಮುನಿವೇಷದಾಳಿ ॥ ೧ ॥ ಜೋ ಜೋ
ಭಿಕ್ಷಾಂದೇಹಿಯೆಂದೊದರಿ । ಮುನಿವೇಷ ಕಂಡನಸೂಯೆಯು ಬೆದರಿ ।
ಪತಿಯ ಕಮಂಡಲದುದಕವ ಚೆದರಿ । ಜೋ ಜೋ ಶಿಶುಗಳಾಗಿ ನಿವೆಲ್ಲ
ರೊದರಿ ॥ ೨ ॥ ಜೋ ಜೋ ಸತಿಯರು ಚಿಂತೆಯಮಾಡಿ । ಬಂದರು
ನಾರದಮುನಿಯೊಡಗೂಡಿ । ಜೋ ಜೋ ಶಿಶುಗಳಾಗಿದ್ದದ್ದು ನೋಡಿ
ಬಾಲರೆ । ಮಲಗಿರಿ ಋಷಿಗೆ ನಮಸ್ಕಾರ ಮಾಡಿ ॥ ೩ ॥ ಜೋ ಜೋ
ಪತಿವ್ರತೆ ಪತಿಯ ತಾಯೆಂದು । ಜೋ ಜೋ ದತ್ತಾತ್ರಿ ಮುನಿಯಾಗಿ
ನಿಂದು । ಜೋ ಜೋ ಅನಸೂಯಾ ವರವ ಬೇಡೆಂದು । ಜೋ ಜೋ
ಸತಿಯರ ಕೂಡ್ಯಾಗ ಬಂದು ಜೋ ಜೋ ॥ ೪ ॥

ಈ ಪ್ರಕಾರ ಜೋಗುಳ ಪದಹಾಡಿ ಮಕ್ಕಳನ್ನು ಮಲಗಿಸಿದಳು.
ಕೂಡಲೇ ವೃಷ್ಟಾನ್ನವನ್ನು ಮಾಡಿ ತುಪ್ಪ ಬೆರಸಿ ಮಕ್ಕಳನ್ನು ಎಬ್ಬಿಸಿ,
ತುತ್ತು ಕೈಯಲ್ಲಿ ಕೊಟ್ಟು ಉಣಿಸುತ್ತ ಗುಬ್ಬಿ ಬಂತು, ಕಾಗೆ ಬಂತು
ಎಂದು ಮರೆಸಿ ತುತ್ತುಗಳನ್ನು ಹಾಕುತ್ತ ಮಕ್ಕಳ ಬಾಲಲೀಲೆಯನ್ನು
ನೋಡಿ ಸಂತೋಷಪಡುತ್ತಿದ್ದಳು. ಉಣಿಸುವದು ಮುಗಿದನಂತರ
ಅವರ ಕೈಬಾಯಿ ತೊಳೆದು ತಾನು ಉಚ್ಚಿ ಇಟ್ಟಂಥ ಶೀರೆಯನ್ನುಟ್ಟು
ಕೊಂಡು ಪತಿಯು ಬರುವ ಕಾಲವು ಸಮೀಪಿಸಿತೆಂದು ಅನುಕೂಲವಾದ
ಪದಾರ್ಥಗಳನ್ನು ಒದಗಿಸಹತ್ತಿದಳು. ಅತ್ರಿಋಷಿಯು ತನ್ನ ಜಪ-

ತಪ, ಹೋಮಾದಿ ಕಾರ್ಯಗಳನ್ನು ಮುಗಿಸಿಕೊಂಡು ಪರ್ಣಕುಟೀರಕ್ಕೆ ಬಂದು ನೋಡುತ್ತಾರೆ; ಬಾಗಿಲಮುಂದೆ ಕಟ್ಟಿದ ಬಾಲಕರ ತೊಟ್ಟಿಲವನ್ನು ಕಂಡು ಆಶ್ಚರ್ಯಭರಿತರಾಗಿ, ಈ ಬಾಲಕರು ಯಾರೆಂದು ಮಡದಿಯನ್ನು ಕೇಳಿದರು. ಅದಕ್ಕೆ ಸಾಧ್ವಿಯು— "ಇವರು ಅತಿಥಿ ರೂಪದಿಂದ ನಮ್ಮ ಮನೆಗೆ ಬಂದು ದಿಗಂಬರಳಾಗಿ ಬಡಿಸಬೇಕೆಂದರು. ಆದರಿಂದ ನನಗೆ ಬಹಳೇ ಚಿಂತೆಯಾಯಿತು. ಆದರೂ ಧೈರ್ಯದಿಂದ ನಿಮ್ಮನ್ನು ಸ್ಮರಿಸಿ ಕಮಂಡಲೋದಕವನ್ನು ತಂದು ಈ ಅತಿಥಿಗಳ ಮೇಲೆ ಚಿಮುಕಿಸಲು ಮೂವರೂ ಹಸುಗೂಸುಗಳಾದರು. ಉಳಿದದ್ದು ನಾಸರಿಯೆನು" ಎನಲು ಅತ್ರಿಋಷಿಯು ತನ್ನ ಜ್ಞಾನದೃಷ್ಟಿಯಿಂದ ಎಲ್ಲವನ್ನೂ ತಿಳಿದು ಪರಮ ಆಶ್ಚರ್ಯದಿಂದ ಇವರು ಹರಿ-ಹರ-ಬ್ರಹ್ಮಾದಿಗಳು ಇನ್ನು ನಮಗೆ ಜಪ, ತಪ, ಯೋಗಾದಿಗಳು ಏಕೆ? ಇಹಲೋಕದ ಭೋಗವೇಕೆ? ಇವರೇ ನನ್ನ ಮಕ್ಕಳಾಗಿ ಬಂದ ಮೇಲೆ ಇವರ ಬಾಲಲೀಲೆಗಳನ್ನು ನೋಡುತ್ತ ಕಾಲಕಳೆಯುವದೇ ಮೇಲಾದ ಸೌಖ್ಯವು ಎಂದು ತಿಳಿದುಕೊಂಡರು. ಶಿಶುಗಳು ದಿದೇ ದಿನೇ ತಮ್ಮ ಬಾಲಲೀಲೆಗಳನ್ನು ಹೆಚ್ಚುಹೆಚ್ಚಾಗಿ ತೋರಿಸುತ್ತ ತಂದೆತಾಯಿಗಳನ್ನು ಆನಂದಗೊಳಿಸಹತ್ತಿದರು. ಒಂದು ಕೂಸು, ತಾರಮ್ಮಯ್ಯ ಆಡಹತ್ತಿತು; ಮತ್ತೊಂದು ತೋಳಾಂಬುಲಿ ಆಡಹತ್ತಿತ್ತು; ಇನೆಯ ಮಗುವು ತಾತಾ ಗುಬ್ಬಿ ತಾವನ್ನ ಗುಬ್ಬಿ, ಆಟವನ್ನು ಆಡಹತ್ತಿತ್ತು. ಇಂಥ ಶಿಶುರೂಪರಾದ ತ್ರಿಮೂರ್ತಿಗಳ ಬಾಲಲೀಲೆಯನ್ನು ನೋಡುವದು ದೇವತೆಗಳಿಗೆ ಸಹ ಅಸಂಭವವಾಗಿದ್ದರೂ, ಪತಿವ್ರತಾಮಹಿಮೆಯಿಂದ ಅನಸೂಯಾದೇವಿಗೆ ಅನಾಯಾಸವಾಗಿ ದೊರೆಯಿತು. ವಾಚಕರೇ!! ಆ ಸಾಧ್ವಿಯು ಎಷ್ಟು ಪುಣ್ಯವಂತಳೆಂಬದನ್ನು ನೀವೇ ತರ್ಕಿಸಿರಿ. ಮಕ್ಕಳು ತಪ್ಪು ಹೆಜ್ಜೆಯನ್ನು ಇಡುತ್ತ, ಕಟ್ಟೆರಿವೆಯನ್ನು ಕಂಡು ಚಿಟ್ಟನೇ ಚೀರುವರು; ಛೀ ಛೀ ಯೆಂದರೆ ನಗುವರು; ಹೊರಗೆ ಹರಿದಾಡುತ್ತ ಹೋಗಿ ಮಣ್ಣು ತಿನ್ನುವರು; ಬಾಯಿ ತೆರೆದು ನೋಡಲಾಗಿ, ಸಮಸ್ತ ಲೋಕಗಳೂ ಆಶ್ಚರ್ಯಕರವಾಗಿ ತೋರಹತ್ತಿದವು. ಇವೆಲ್ಲ ಆಟಗಳನ್ನು ಕಂಡು ನೇಮಹೋಮಗಳನ್ನು

ಮುರಿತು, ಆನಂದದಿಂದ ಒಂದು ಸಾವಿರ ವರುಷ ಕಳೆದವು. ವಾಚಕರೇ ಸಾವಿರ ವರುಷಗಳವರೆಗೆ ಅತ್ರಿಮೂರ್ತಿಗಳು ಬಾಲಕರಾಗಿಯೇ ಇದ್ದ ರಿಂದ ಆ ಸಾಧ್ವಿಯು ಪತಿವ್ರತಾಪ್ರಭಾವವೆಷ್ಟೆಂಬದನ್ನು ನೀವೇ ಊಹಿ ಸಿರಿ. ಧನ್ಯ! ಧನ್ಯ!! ಪತಿವ್ರತಾ ಸ್ತ್ರೀಯರೇ ಧನ್ಯರು!!!

ಎಂಟನೆಯ ಭಾಗ

ನಿಜರೂಪ

ಶರದೃತು ಮುಗಿದು ಹೇಮಂತಋತುವು ಪ್ರಾಪ್ತವಾಯಿತು. ಮುಂಜಾನೆ ೯ ಬಡಿದರೂ ಚಳಿಯೇ ಇರಹತ್ತಿತು ಅಂಥ ಚಳಿಗಾಲದಲ್ಲಿ ವೈಕುಂಠ ಲೋಕದ ವಿಷ್ಣುಮಂದಿರದಿಂದ ಏಳು ಬಡಿಯುವದರೊಳಗಾಗಿ ಮೂವರು ತರುಣಿಯರು ತಮ್ಮತಮ್ಮ ಪತಿಗಳನ್ನು ಹುಡುಕುವದಕ್ಕೆ ತಮ್ಮತಮ್ಮ ವಾಹನಗಳನ್ನೇರಿ ಹೊರಟರು. ಪತಿಗಳು ಹೋಗಿ ಸಾವಿರ ವರ್ಷಗಳಾದರೂ ಬಾರದೆ ಇದ್ದದರಿಂದ ಬಹಳೇ ಚಿಂತಾಕ್ರಾಂತರಾದರು ತ್ರೈಲೋಕ್ಯಾಧಿಪತ್ಯವೇ ಬೇಸರಾಗಿ ಅರಮನೆಗಳನ್ನು ಬಿಟ್ಟು ಅಡವಿಯಲ್ಲಿ ಎಲ್ಲ ಕಡೆಯಲ್ಲಿಯೂ, ಎಲ್ಲ ಋಷಿಗಳ ಆಶ್ರಮಗಳಲ್ಲಿಯೂ, ಅತ್ರಿಋಷಿಯ ಆಶ್ರಮವನ್ನು ಹುಡುಕುತ್ತ, ಕಾಣದೆ ತಿರುತಿರುಗಿ ಬೇಸತ್ತು, ದೇವಲೋಕದಲ್ಲಿ, ಗಂಧರ್ವರಲ್ಲಿ, ನಾಗಲೋಕದಲ್ಲಿ, ಯಕ್ಷಲೋಕದಲ್ಲಿ ಹುಡುಕಿ ಸಿಗದ್ದರಿಂದ ಬೇಸತ್ತು ನಾವು ಪತಿವ್ರತೆಯ ಅಪಮಾನ ಮಾಡಿಸುವದಕ್ಕೆ ಹಟ ತೊಟ್ಟದ್ದರಿಂದ ಪತಿಗಳು ಆಗಲಿ

ನಮಗೆ ಸಹಸ್ರವರುಷಗಳ ಕಠಿಣ ಶಾಸನ ಮಾಡಿದಂತಾಯಿತು. ಲೋಕದಲ್ಲಿ ಪಾತಿವ್ರತ್ಯವೇ ಮೇಲಾಯಿತು. ಯಾವಲೋಕದಲ್ಲಾಗಲಿ, ಯಾವದೇಶದಲ್ಲಾಗಲಿ, ಯಾವಜಾತಿಯಲ್ಲಾಗಲಿ ಎಲ್ಲ ಸ್ತ್ರೀಯರಿಗೆ ಪಾತಿವ್ರತ್ಯವೇ ಹೆಚ್ಚೆಂದು ಮಾತಾಡುತ್ತ ನಾವು ಅನಸೂಯಾದೇವಿಗೆ ಶರಣು ಹೊಕ್ಕರೆ, ಪತಿಗಳನ್ನು ಕೂಡಿ ಸುಖದಿಂದ ಇದ್ದೇವು. ನಾವು ಇನ್ನು ಭೂಲೋಕವನ್ನಷ್ಟು ಹುಡುಕಿ ವೈಕುಂಠಕ್ಕೆ ಹೋಗುವಾ ಎಂದು ತಮ್ಮ ತಮ್ಮೊಳಗೆ ಮಾತಾಡುತ್ತ ನಡೆದರು. ಅಷ್ಟರಲ್ಲಿ ಚಳಿಯು ತುಸು ಕಡಿಮೆಯಾಗಿ ಸೂರ್ಯನಾರಾಯಣನ ಕಿರಣಗಳು ಸುತ್ತಲಿ ಪಸರಿಸಿದವು. ಕೂಡಲೇ ಅವರು ಭೂಲೋಕದ ಮಾರ್ಗವನ್ನು ಹಿಡಿದರು. ತುಸು ಮುಂದಕ್ಕೆ ಹೋಗುವಷ್ಟರಲ್ಲಿ ನಾರದರ ಸ್ವಾರಿಯು ಎದುರಿಗೆ ಬಂದು ನಿಂತಿತು. ಕೂಡಲೆ ಆ ಮೂವರು ನಾರದರಿಗೆ ಸಾಷ್ಟಾಂಗನಮಸ್ಕಾರ ಮಾಡಿದರು. ನಾರದರ ಅವರನ್ನು ಕುರಿತು, "ಅಷ್ಟಪುತ್ರಸೌಭಾಗ್ಯವತಿಯರಾಗಿರೆಂ"ದು ಹರಿಸಿದರು. ಆಗ ಲಕ್ಷ್ಮೀದೇವಿಯು "ನಾರದರೇ, ದಯವಿಟ್ಟು ನಮ್ಮ ಪತಿಗಳನ್ನು ತೋರಿಸಿರಿ ನಾವು ಅನಸೂಯಾಮಾತೆಗೆ ಶರಣುಹೋಗುತ್ತೇವೆ. ಲೋಕದಲ್ಲಿ ಹೆಣ್ಣುಮಕ್ಕಳಿಗೆ ಪತಿಭಕ್ತಿಯೇ ಮೇಲಾದದ್ದು. ಪತಿಸೇವೆ ಮಾಡುವ ಹೆಣ್ಣುಮಕ್ಕಳೇ ಧನ್ಯರು! ನಾವು ಮಾಡಿದ ಪ್ರತಿಜ್ಞೆಯ ಫಲವನ್ನು ಒಂದು ಸಹಸ್ರ ವರುಷ ಉಂಡೆವು; ಎಂದು ದೈನ್ಯದಿಂದ ನಾರದರಿಗೆ ಬೇಡಿಕೊಳ್ಳುತ್ತಿರಲು ನಾರದರು ಇವರ ಗರ್ವನಷ್ಟವಾದದ್ದಕ್ಕೆ ಸಂತೋಷಪಟ್ಟು ಅತ್ರಿಋಷಿಯ ಪರ್ಣಕುಟಿರದ ಮಾರ್ಗವಾಗಿ ಅವರನ್ನು ಕರೆದುಕೊಂಡು ಹೊರಟರು. ಮಾರ್ಗದಲ್ಲಿ ಶುಭಶಕುನಗಳು ಆಗಹತ್ತಿದವು ಮುತ್ತೈದಿಯರು ಮಂಗಳದ್ರವ್ಯವನ್ನು ಹಿಡಕೊಂಡು ಎದುರಿಗೆ ಬಂದರು. ಆಕಳುಗಳು ಅಂಬಾ ಎಂದು ಒದರಿ ತಮ್ಮ ಕರುಗಳನ್ನು ಕರಕೊಂಡು ಬಂದವು. ನಾರಿಯರು ತುಂಬಿದ ಕೊಡಗಳನ್ನು ಹೊತ್ತುಕೊಂಡು ಎದುರಿಗೆ ಬಂದರು. ಅವುಗಳನ್ನೆಲ್ಲ ಕಂಡು ಆ ಮೂವರು ಹರ್ಷವುಳ್ಳವರಾದರು. ನಾರದರು ಸಮೀಪದ ನದೀತೀರದ ಕಡೆಗೆ ಸಾಗಿದರು. ಲಕ್ಷ್ಮಿ-ಸರಸ್ವತಿ-ಪಾರ್ವತಿಯರು

ತಮ್ಮತಮ್ಮ ವಾಹನಗಳನ್ನಿಳಿದು ನದಿಯಲ್ಲಿ ಸ್ನಾನಮಾಡಿ ಕ್ಷುಧಾ ಶಾ
ಯನ್ನು ಮಾಡಿಕೊಂಡು ನಾರದರಿಗೆ ಏಳಿರೆಂದು ಅವಸರ ಮಾಡಹ
ದರು. ನಾರದರು ಇವರಿಗೆ ಹಾಸ್ಯಮಾಡುವದು ಇದೇ ಸಮಯವೆಂ
ನಕ್ಕು-“ಎಷ್ಟು ಅವಸರ ಮಾಡುವಿರಿ? ನಾನು ಸಂಗಡ ಬರುವದೇ ಇ
ನೀವೇ ಹೋಗಿರಿ. ಬೇಕಾದರೆ ತುಸು ತಡೆಯಿರಿ. ನಾನು ನನ್ನ ನಿ
ಕರ್ಮ ಮುಗಿಸಿ ಉಪಹಾರ ತೀರಿಸಿಕೊಂಡು ಬರುತ್ತೇನೆ”ಂದು
ಅಂದರು. ಅದಕ್ಕೆ ಅವರು ನಿರುಪಾಯರಾಗಿ ಸುಮ್ಮನೇ ಕುಳಿತರು
ನಾರದರು ನಿತ್ಯಕರ್ಮವನ್ನು ಮುಗಿಸಿಕೊಂಡು ತ್ರಿಮೂರ್ತಿಗಳ ಬಾ
ಲೀಲೆಗಳನ್ನು ನೋಡುವ ಉತ್ಕಟೇಚ್ಛೆಯಿಂದ ಆ ಸ್ತ್ರೀಯರೊಡನೆ
ತೀವ್ರವಾಗಿ ನಡೆದರು. ಅತ್ರಿಋಷಿಗಳ ಆಶ್ರಮವು ಬಂದಿತು ಅಲ್ಲಿ ಸ
ಪತಿಗಳು ಹಸಿವುನೀರಡಿಕೆಗಳನ್ನು ಲೆಕ್ಕಿಸದೆ, ಮಕ್ಕಳ ಬಾಲಲೀಲೆಯ
ಲ್ಲಿಯೇ ಮಗ್ನರಾಗಿದ್ದರು. ನಾರದರು ಬಂದು ಬಾಗಿಲಲ್ಲಿ ನಿಂತರೂ
ಅವರಿಗೆ ಅರಿವೇ ಆಗಲಿಲ್ಲ. ಒಂದು ಮಗುವು ತೊಟ್ಟಿಲಹಗ್ಗ ಹಿಡಿದು
ಕೊಂಡು ಜೀಕು ಹೊಡಿಯಹತ್ತಿದೆ; ಇನ್ನೊಂದು ಅವ್ವಾ ಎಂದು ಅಳುತ್ತ
ಅನಸೂಯಾದೇವಿಯ ಬೆನ್ನು ಹತ್ತಿದೆ; ಇನ್ನೊಂದು ಕಾ-ಕಾ ಚಿಂವಚಿಂವ
ಎಂದು ತೊದಲ್ನುಡಿ ನುಡಿಯುತ್ತ ಅತ್ರಿಋಷಿಗಳ ತೊಡೆಯಮೇಲೆ
ಕುಳಿತು ಆಡಹತ್ತಿದೆ. ಇದನ್ನೆಲ್ಲ ನಾರದರು ಕಂಡು ಆ ಮೂವರು
ಸ್ತ್ರೀಯರಿಗೆ ತೋರಿಸಿ ಅವರನ್ನು ಒಳಗೆ ಕರೆದೊಯ್ದು ಅತ್ರಿಋಷಿಗಳ
ಪಾದದ ಮೇಲೆ ಕೆಡವಿದರು. ಇದನ್ನು ಕಂಡು ಋಷಿಯು ಗಾಬರಿಯಾಗಿ
ನಾರದರನ್ನು ಕುರಿತು ಇವರಾರೆಂದು ವಿಚಾರಿಸಲು ನಾರದರು “ಇವರು
ನಿಮ್ಮ ಸೊಸೆಯರು; ಮಕ್ಕಳ ಹಿಂದೆ ಸೊಸೆಯರೂ ಬಂದರು” ಎಂದು
ಹಾಸ್ಯ ಮಾಡಿದರು. ಅತ್ರಿಋಷಿಯು ತನ್ನ ಪತ್ನಿಯ ಪ್ರಭಾವಕ್ಕೆ
ಮೆಚ್ಚಿ ಪತ್ನಿಯನ್ನು ಕರೆದು ಇವರು ನಿನ್ನ ಸೊಸೆಯರು ಬಂದಿರುವರು.
ಇವರನ್ನು ಮನ್ನಿಸು ಎಂದು ಹೇಳುವಷ್ಟರಲ್ಲಿಯೇ ಲಕ್ಷ್ಮಿ--ಸರಸ್ವತಿ--
ಪಾರ್ವತಿಯರು ಅನಸೂಯಾದೇವಿಯ ಪಾದಕ್ಕೆ ಎರಗಿ ಉಡಿಯೊಡ್ಡಿ
ಬೇಡಿಕೊಂಡರು. “ತಾಯಿ, ನೀನೇ ಧನ್ಯಳು! ನಿನ್ನ ಸಮಾನ ಪತಿವ್ರತೆ

ಯನ್ನು ಎಲ್ಲಿಯೂ ಕಾಣಲಿಲ್ಲ. ನಮಗೆ ನಮ್ಮ ಪತಿಗಳನ್ನು ಕೊಟ್ಟು ಕಾಪಾಡು'' ಎಂದು ದೈನ್ಯದಿಂದ ಬೇಡಿಕೊಂಡು ನಿಂತಿರುವದನ್ನು ಅನಸೂಯೆಯು ಮೂವರು ಮಕ್ಕಳನ್ನು ಕರೆತಂದು ನಿಮ್ಮನಿಮ್ಮ ಪತಿಗಳನ್ನು ಕೂಡಿಕೊಳ್ಳಿರಿ ಎಂದಳು ಆಗ ಅವರಿಗೆ ತಮ್ಮ ಪತಿಗಳ ಗುರ್ತು ಸಿಗದೆ "ನಾವು ಪತಿವ್ರತಾಮಹಿಮೆಯನ್ನು ತಿಳಿದಿದ್ದಿಲ್ಲ, ನೀನೇ ಜಗತ್ತಿನಲ್ಲಿ ಪ್ರಕಟಮಾಡಿದಿ, ಪತಿವ್ರತಾ ಮಹಿಮೆಗೆ ತ್ರೈಮೂರ್ತಿಗಳು ಸಹ ಗದಗದ ನಡುಗಿ ಹಸುಗಳಾಗಿ ಸಹಸ್ರವರುಷ ದೇವತ್ವವನ್ನುಳಿದು ಈ ಕೃಷ್ಣಾಜಿನದ ತೊಟ್ಟಿಲಲ್ಲಿ ತೂಗಾಡಬೇಕಾಯಿತು ನೀವು ಸ್ತ್ರೀಯರ ರತ್ನವು" ಎಂದು ನಾನಾಬಗೆಯಿಂದ ಸ್ತೋತ್ರ ಮಾಡಿದರು. ಆಗ ಅನಸೂಯೆಯು ಪತಿಯು ಪಾದ ಪೂಜೆ ಮಾಡಿ ಚರಣೋದಕವನ್ನು ಆ ಕೂಸುಗಳಮೇಲೆ ಚಿಮುಕಿಸಲು, ತ್ರಿಮೂರ್ತಿಗಳು ತಮ್ಮ ನಿಜರೂಪಗಳನ್ನು ತಾಳಿದರು. ಇದನ್ನು ಕಂಡು ಅವರ ಹೆಂಡಂದಿರು ಆನಂದಾಬ್ಧಿಯಲ್ಲಿ ಮುಳುಗಿದರು. ದೇವದುಂದುಭಿಗಳು ಮೊಳಗಿದವು. ದೇವಾಂಗನೆಯರು ಪೂಮಳೆಗರೆದರು. ಸುರರು ಜಯಜಯಕಾರ ಮಾಡಿದರು. ನಿಜರೂಪವನ್ನುನೋಡಿ ಋಷಿವರ್ಗದ ಆನಂದಬಾಷ್ಪಗಳು ಮೇಘದಂತೆ ಉದುರಿದವು. ನಾರದರು ಇದನ್ನೆಲ್ಲ ಕಂಡು ಆನಂದದಿಂದ ಕುಣಿದಾಡಹತ್ತಿದರು ಸಾಧ್ವಿಮಣಿಯಾದ ಅನಸೂಯೆಗೆ ತ್ರೈಮೂರ್ತಿಗಳು ವರವನ್ನುಕೊಟ್ಟು ತಮ್ಮತಮ್ಮ ಪತ್ನಿಸಮೇತರಾಗಿ ವಾಹನಗಳನ್ನೇರಿ ತಮ್ಮತಮ್ಮ ಲೋಕಗಳಿಗೆ ತೆರಳಿದರು. ತ್ರಿಮೂರ್ತಿಗಳ ಅಂಶದಿಂದ ದತ್ತಾತ್ರೆಯ ಮುನಿಯಾಗಿ ಅನುಸೂಯೆಯ ಹತ್ತರ ಲೋಕೋದ್ಧಾರ ಮಾಡುತ್ತ ಇರಹತ್ತಿದನು ಕಾರಣ ಸ್ತ್ರೀಯರಿಗೆ ಪಾತಿವ್ರತ್ಯವೇ ಮೇಲಾದದ್ದು ಚಿಕ್ಕಹೆಣ್ಣುಮಕ್ಕಳಿಗೆ ತಕ್ಕ ಶಿಕ್ಷಣ ಕೊಟ್ಟು ಅವರು ಸಚ್ಛೀಲರಾಗುವಂತೆ ತಂದೆ-ತಾಯಿಗಳೂ ಗುರು-ಹಿರಿಯರೂ ಸದಾ ವರ್ತಿಸತಕ್ಕದ್ದು.

ಸಂಪೂರ್ಣ